ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 41 | ಅಕ್ಟೋಬರ್ 11, 1981 | ಬೆಲೆ : 60 ಪೈಸೆ

ಸಾದತ್ ಬಲಿ

ಹಂತಕರು ಹಾರಿಸಿದ ಗುಂಡುಗಳು ಬಡಿದು ಈಜಿಪ್ಟಿನ ಅಧ್ಯಕ್ಷ ಅನ್ವರ್ ಸಾದತ್ ಅವರು ಅಕ್ಟೋಬರ್ 6ರಂದು ಮರಣಹೊಂದಿರುವರು. "ಈಜಿಪ್ಟಿನ ವಿಮೋಚನೆಗಾಗಿ ಸ್ವತಂತ್ರ ಸಂಸ್ಥೆ" ಎಂಬ ಸಂಘಟನೆಯು ಈ ಹತ್ಯೆಯ ಹೊಣೆಯನ್ನು ಹೊತ್ತಿದೆ ಎಂದು ಹೇಳಲಾಗಿದೆ. ಇಸ್ರಾಯೇಲ್ ವಿರುದ್ಧ 1973 ಅಕ್ಟೋಬರದಲ್ಲಿ ನಡೆದ ಯುದ್ಧದ ಆರನೇ ವಾರ್ಷಿಕೋತ್ಸವ ಸಮಾರಂಭ ಸಂದರ್ಭದಲ್ಲಿ ಸಾದತ್ ಅವರು ಮಿಲಿಟರಿ ಪೆರೇಡನ್ನು ವೀಕ್ಷಿಸುತ್ತಿದ್ದಾಗ ಈ ದಾಳಿ ನಡೆಯಿತು. ಅಧ್ಯಕ್ಷರ ಮಿಲಿಟರಿ ಸಲಹೆಗಾರರೊಬ್ಬರು ಹಾಗೂ ಬೆಂಗಾವಲು ಪಡೆಯ ಸಿಪಾಯಿಯೊಬ್ಬ ಈ ಸಂದರ್ಭದಲ್ಲಿ ಅಸುನೀಗಬೇಕಾಯಿತು. ಉಪಾಧ್ಯಕ್ಷ ಹೋಸ್ನಿ ಮುಬಾರಕ್, ರಕ್ಷಣಾ ಸಚಿವ, ಮಹಾ ದಂಡನಾಯಕ ಹಾಗೂ ಹಲವು ರಾಜತಾಂತ್ರಿಕರು ಹಲ್ಲೆಯಲ್ಲಿ ಗಾಯಗೊಂಡಿರುವರು.

ಎರಡನೆ ಜಾಗತಿಕ ಯುದ್ಧದ ನಂತರ ಈ ತನಕ ಬೇರೆಬೇರೆ ದೇಶಗಳ ಸರಕಾರದ ಅತ್ಯುನ್ನತ ಸ್ಥಾನದಲ್ಲಿರುವ ಸುಮಾರು 40 ಮಂದಿ ಪ್ರಮುಖರು ಹಂತಕರ ಕೈಯಿಂದ ಕೊಲೆಗೈಯ್ಯಲ್ಪಟ್ಟಿರುವರು ಮತ್ತು ಒಂದು ಡಜನಿಗಿಂತಲೂ ಹೆಚ್ಚು ಪ್ರಮುಖರು ಕೊಲೆಯಾಗುವುದರಿಂದ ಸ್ವಲ್ಪದರಲ್ಲೇ ಪಾರಾಗಿರುವರು. ಕೊಲೆಯಾದವರ ಸಾಲಿಗೆ ಈಗ ಸಾದತ್ ಅವರೂ ಸೇರಿರುವರು. ಈ ವರ್ಷದಲ್ಲೆ ಬಾಂಗ್ಲಾದೇಶದ ಅಧ್ಯಕ್ಷರಾಗಿದ್ದ ಜಿಯಾ-ಉರ್-ರಹಮಾನ್ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು.

ಸಂಪಾದಕೀಯ

ಇರಾನಿನಲ್ಲಿ ಅಧಿಕಾರದ ಉನ್ನತ ಸ್ಥಾನದಲ್ಲಿದ್ದ ಹಲವು ಪ್ರಮುಖರನ್ನು ಕೊಲ್ಲಲಾಯಿತು. ಈಜಿಪ್ಟಿನಲ್ಲಿ ಇದೀಗ ಸಾದತ್ ಅವರ ಕೊಲೆಯಾಯಿತು.

ಈ ಎಲ್ಲ ಘಟನೆಗಳ ಹಿಂದೆ ಹೆಚ್ಚು ಕಡಮೆ ಒಂದೇ ರೀತಿಯ ರಾಜಕೀಯ ಹಿನ್ನೆಲೆಯು ಕಂಡುಬರುತ್ತಿದೆ. ಬಾಂಗ್ಲಾದೇಶದಲ್ಲಾಗಲೀ, ಇರಾನಿನಲ್ಲಾಗಲೀ, ಈಜಿಪ್ಟಿನಲ್ಲಾಗಲೀ–ಈ ಎಲ್ಲಾ ಕಡೆಗಳಲ್ಲಿ ವ್ಯವಸ್ಥಿತವಾಗಿ ಪ್ರಜಾಪ್ರಭುತ್ವ ಹಕ್ಕುಗಳ ದಮನವು ನಡೆಯುತ್ತಾ ಬಂದಿದೆ. ಆಡಳಿತ ನಡೆಸುವ ಕೂಟಕ್ಕೆ ಎದುರಿಲ್ಲದ ವಾತಾವರಣವನ್ನುಂಟುಮಾಡಲು ಪ್ರಯತ್ನವು ನಡೆದಿದೆ. ಸಾದತ್ ಅವರು ಪೇಲೆಸ್ತೀನಿಯನ್ ಜನರ ಹಿತಗಳನ್ನು ಬದಿಗೊತ್ತಿ, ಇಸ್ರಾಯೇಲ್‌ನೊಂದಿಗೆ ರಾಜಿಮಾಡಿಕೊಂಡಿರುವುದು ಮತ್ತು ಹೆಚ್ಚುಹೆಚ್ಚಾಗಿ ಅಮೇರಿಕಾ ಸಾಮ್ರಾಜ್ಯಶಾಹಿಯ ಕೈಗೊಂಬೆಯಾಗುತ್ತಿರುವುದರ ವಿರುದ್ಧ ಈಜಿಪ್ಟಿನಲ್ಲಿ ಇತ್ತೀಚಿಗಿನ ದಿನಗಳಲ್ಲಿ ವ್ಯಾಪಕ ಪ್ರತಿಭಟನೆ ಬೆಳೆಯುವುದು ಪ್ರಾರಂಭವಾಗಿದ್ದಿತು. ಅತೃಪ್ತಿ, ಅಸಮಾಧಾನಗಳು ಸ್ಫೋಟಕ ಪರಿಸ್ಥಿತಿಯನ್ನುಂಟುಮಾಡಿದ್ದುವು. ಸಾದತ್ ಅವರು ಹೆಚ್ಚುಹೆಚ್ಚು ಸರ್ವಾಧಿಕಾರ ಕ್ರಮವಹಿಸಿದಂತೆಲ್ಲಾ, ಅವರ ಜನ

[ಕಡೇ ಪುಟ ನೋಡಿ]

ರಾಜ್ಯ ಕಾಂಗ್ರೆ ಒಳಜಗಳದಲ್ಲಿ ಹೊಸ ಅಧ್ಯಾಯ?

ರಾವ್ - ರಾಠೋಡ್ ವಿರಸ

ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿಯ ಅಧ್ಯಕ್ಷ ಕೆ. ಟಿ. ರಾಠೋಡ್ ಮತ್ತು ಕರ್ನಾಟಕದ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರಿಬ್ಬರೊಳಗೆ ವಿರಸ ಉಂಟಾಗಿದ್ದು ತಿಕ್ಕಾಟ ಪ್ರಾರಂಭವಾಗುತ್ತಲಿದೆ ಎಂದು ವರದಿಯಾಗಿದೆ. ಸರ್ಕಾರ ಮತ್ತು ಪಕ್ಷ ಸೌಹಾರ್ದದಿಂದ ಕೆಲಸ ಮಾಡುವಂತಾಗಲು ಮುಖ್ಯಮಂತ್ರಿ ಗುಂಡೂರಾವ್ ಅವರು ಮತ್ತು ಕೆ.ಪಿ.ಸಿ.ಸಿ.(ಐ)ಯ ಅಧ್ಯಕ್ಷ ರಾಠೋಡ್ ಅವರು ತಮ್ಮ ನಡುವಣ ಭಿನ್ನಾಭಿಪ್ರಾಯವನ್ನು ಪರಸ್ಪರ ಸಮಾಲೋಚಿಸಿ ಬಗೆಹರಿಸಿಕೊಳ್ಳುವಂತೆ ಪಕ್ಷದ ವರಿಷ್ಠರು ಸಲಹೆ ಇತ್ತಿದ್ದಾರೆ.

ರಾಠೋಡ್ ಅವರು ಜಿಲ್ಲಾ ಕಾಂಗ್ರೆಸ್ (ಐ) ಸಮಿತಿಗಳನ್ನು ಪುನರ್ರಚಿಸಲು ನಿರ್ಧರಿಸಿದಾಗ ಇಬ್ಬರ ನಡುವಣ ತಿಕ್ಕಾಟ ವರಿಷ್ಟ ಮಂಡಲಿಗೆ ಅರಿವಾಯಿತು. ಪಕ್ಷದ ವಲಯಗಳ ಪ್ರಕಾರ ಪುನರ್ರಚನೆ ಕುರಿತು ಚರ್ಚಿಸಲು ರಾಜ್ಯ ಶಾಖೆ ಅಧ್ಯಕ್ಷರ ಭೇಟಿಗೆ ಮುಖ್ಯಮಂತ್ರಿ ನಿರಾಕರಿಸಿದರು. ಆದರೆ ತಮ್ಮ ಯೋಜನೆಯಂತೆ ಕಾರ್ಯಪ್ರವೃತ್ತರಾದ ರಾಠೋಡ್ ಅವರು ಕಳೆದ ತಿಂಗಳು ಪಟ್ಟಿಯನ್ನು ಎ. ಐ. ಸಿ. ಸಿ. (ಐ)ಗೆ ಸಲ್ಲಿಸಿರುವರು.

ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಸಾಧ್ಯತೆ ಇದ್ದು, ಅಂತಹ ಸಂದರ್ಭದಲ್ಲಿ ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ ಜಿಲ್ಲಾ ಕಾಂಗ್ರೆಸ್ (ಐ) ಸಮಿತಿಗಳ ಅಧ್ಯಕ್ಷರುಗಳದ್ದೂ ಮುಖ್ಯ ಪಾತ್ರವಿರುವುದರಿಂದಲೇ ಜಿಲ್ಲಾ ಸಮಿತಿಗಳ ಪುನರ್ರಚನೆಯ ಬಗ್ಗೆ ಮುಖ್ಯಮಂತ್ರಿಯವರ ವಿರೋಧವಿದೆ ಎಂದು ಹೇಳಲಾಗುತ್ತಿದೆ. ಅದೂ ಅಲ್ಲದೆ ರಾಠೋಡ್ ಅವರು ತನ್ನ ಅಧಿಕಾರವನ್ನು ಚಾಲೂ ಮಾಡಲು ಪ್ರಾರಂಭಿಸಿರುವ ಮೊದಲಲ್ಲೆ ಶಾಸಕ ಐ. ಡಿ. ಸಾಲಪ್ಪ ಅವರ ಮೇಲೆ ಎಫ್. ಎಂ. ಖಾನ್ ಕಡೆಯ ಯೂತ್ ಕಾಂಗ್ರೆಸ್‌ನವರು ನಡೆಸಿದ ಹಲ್ಲೆಯ ಬಗ್ಗೆ ಅತೃಪ್ತಿಯನ್ನು ಸೂಚಿಸಿ ಹೈಕಮಾಂಡಿಗೆ ಬರೆದಿರುವರೆಂದೂ ಸುದ್ದಿ ಇದೆ. ಈ ವಿಚಾರವೂ ಮುಖ್ಯಮಂತ್ರಿಯವರಿಗೆ ಕಹಿಯಾಗುವಂತಾದ್ದೇ ಆಗಿದೆ.

ಪಕ್ಷ ಮತ್ತು ತತ್ವಗಳಿಗಿಂತ ಅಧಿಕಾರವೇ ಮುಖ್ಯವೆಂದು ನಂಬಿರುವ ಅಧಿಕಾರ ಲಾಲಸೆ ಜನರಿಂದ ತುಂಬಿದ ಕಾಂಗ್ರೆಸ್ಸಿನಲ್ಲಿ ಅಧಿಕಾರದಲ್ಲಿರುವ ವ್ಯಕ್ತಿಗಳಿಗೇ ಹೆಚ್ಚು ಮಹತ್ವ ಕೊಡಲಾಗುತ್ತಿದೆ. ಅಧಿಕಾರದಲ್ಲಿರುವವರಿಗೂ ಪಕ್ಷವು ತಮ್ಮ ಕೈಗೊಂಬೆಯಾಗಬೇಕೆಂಬ ಹಂಬಲ. ರಾಜ್ಯದ ಕಾಂಗ್ರೆಸ್

[ಕಡೇ ಪುಟ ನೋಡಿ]

ಜೀವನಾವಶ್ಯಕ ಕನಿಷ್ಟ ದಿನಗೂಲಿ ಒತ್ತಾಯಿಸಿ

ಕೃಷಿಕಾರ್ಮಿಕರ ಯಶಸ್ವಿ ಸಮಾವೇಶ

ಕೇಂದ್ರ ಸರಕಾರದ ಕನಿಷ್ಟಕೂಲಿ ಕಾಯ್ದೆಯು ರಾಜ್ಯಸರಕಾರಗಳಿಗೆ ಕೊನೆಯ ಪಕ್ಷ ಐದು ವರ್ಷಕ್ಕೊಮ್ಮೆಯಾದರೂ ಕನಿಷ್ಟ ದಿನಗೂಲಿಗಳನ್ನು ಪುನರ್‌ವಿಮರ್ಶೆ ನಡೆಸಿ ಬೆಲೆಸೂಚ್ಯಂಕ ಪ್ರಕಾರ ಹೆಚ್ಚಿಸಬೇಕೆಂದು ಕಾನೂನು ಪ್ರಕಾರ ಆದೇಶವಿತ್ತಿದ್ದರೂ ಅನೇಕ ಸರಕಾರಗಳು ಹಾಗೆ ಮಾಡಿರುವುದಿಲ್ಲ. ಮೇಲಿಂದ ಮೇಲೆ ಕನಿಷ್ಟ ದಿನಗೂಲಿ ಪುನರ್‌ವಿಮರ್ಶೆ ನಡೆಸುವುದಿಲ್ಲ. ಕರ್ನಾಟಕ ಸರಕಾರ 1975 ಅಕ್ಟೋಬರ್ 2ರಂದು ಪುನರ್‌ವಿಮರ್ಶೆ ನಡೆಸಿ ಪ್ರಕಟಣೆಯೊಂದನ್ನು ಹೊರಡಿಸಿತ್ತು. ತುರ್ತುಪರಿಸ್ಥಿತಿಯ 20 ಅಂಶ ಕಾರ್ಯಕ್ರಮದ ಪ್ರಚಾರದ ಅಬ್ಬರದಲ್ಲಿ ಈ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಆಗಲೂ ಕೂಡ ಅವತ್ತಿನ ಬೆಲೆಏರಿಕೆಗನುಗುಣವಾಗಿ ಕನಿಷ್ಟ ದಿನಗೂಲಿಗಳನ್ನು ಹೆಚ್ಚಿಸಿ ನಿಗದಿಪಡಿಸಿರಲಿಲ್ಲ. ಆರುವರ್ಷಗಳ ನಂತರ ಈಗ ಕನಿಷ್ಟ ದಿನಗೂಲಿಗಳನ್ನು ನಿಗದಿಪಡಿಸುತ್ತಿರುವಾಗ ಕರ್ನಾಟಕ ಸರಕಾರವು ಜೀವನಾವಶ್ಯಕತೆಯನ್ನು ಮತ್ತು ಬೆಲೆಏರಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಅತೀ ಕಡಿಮೆ ಕನಿಷ್ಟ ದಿನಗೂಲಿಯನ್ನು ನಿಗದಿಪಡಿಸಲು ಹೊರಟಿದೆ.

ಇತ್ತೀಚಿಗೆ ಕರ್ನಾಟಕದಲ್ಲಿ ರೈತರು ತಮ್ಮ ಕೃಷಿ ಉತ್ಪನ್ನಗಳಿಗೆ ಯೋಗ್ಯ ಲಾಭದಾಯಕ ಬೆಲೆಗಳು ಬೇಕೆಂದು ಅತೀ ದೊಡ್ಡ ಪ್ರಮಾಣದಲ್ಲಿ ಹೋರಾಟಕ್ಕಿಳಿದಿದ್ದಾರೆ. ಅಷ್ಟೇ ಅಲ್ಲ ಇಡೀ ದೇಶದಾದ್ಯಂತ ರೈತರು ಹೋರಾಟದ ಹಾದಿಯಲ್ಲಿದ್ದಾರೆ. ಬೆಲೆ ಏರಿಕೆಗನುಗುಣವಾಗಿ ತುಟ್ಟಿ ಭತ್ತೆ, ವೇತನ ಶ್ರೇಣಿಗಳನ್ನು ಹೆಚ್ಚಿಸಬೇಕೆಂದು ಸುಸಂಘಟಿತ ಕಾರ್ಮಿಕವರ್ಗ ಹೋರಾಡುತ್ತಲೇ ಇದೆ. ಮಿತಿಮೀರಿದ ಬೆಲೆಏರಿಕೆಯ ಹಿನ್ನೆಲೆಯಲ್ಲಿ ಇದು ಅನಿವಾರ್ಯವಾಗಿದೆ.

ಮೊದಲೇ ಅತೀ ಕಡಿಮೆ ದಿನಗೂಲಿಯನ್ನು ಹೊಂದುತ್ತಿದ್ದ ಕೃಷಿ ಕೂಲಿಕಾರರ ಜೀವನ ಬೆಲೆಏರಿಕೆಯಿಂದಾಗಿ ಇನ್ನೂ ಅಧೋಗತಿಗಿಳಿದಿದೆ. "ದಾರಿದ್ರ್ಯ ರೇಖೆ"ಗಿಂತಲೂ ಕಡಿಮೆ ಮಟ್ಟದ ಜೀವನವನ್ನು ಸಾಗಿಸುವಂತಾಗಿದೆ. ಕಡುಬಡತನದಲ್ಲಿ ಹಸಿವೆಯಿಂದ ನರಳುವಂತಾಗಿದೆ. ಕಡಿಮೆ ದಿನಗೂಲಿಯಲ್ಲಿ ಬೆಲೆಏರಿಕೆಯಿಂದ ಇನ್ನೂ ಕುಸಿತ. ಮೇಲೆ ಗ್ರಾಮೀಣ ನಿರುದ್ಯೋಗ, ವರ್ಷವಿಡೀ ಉದ್ಯೋಗವಿರುವಂತಿಲ್ಲ. ಈ ಹಿನ್ನೆಲೆಯಲ್ಲಿ ಕೃಷಿಕೂಲಿಕಾರರ ಜೀವನ ಅತ್ಯಂತ ಚಿಂತಾಜನಕವಾಗಿದೆ.

ಕೇರಳ, ಪ. ಬಂಗಾಳ ಮತ್ತು ಪಂಜಾಬ್ ರಾಜ್ಯಗಳಲ್ಲಿ ಕೃಷಿಕೂಲಿಕಾರರು ಹೆಚ್ಚಿನ ಕೂಲಿಯನ್ನು ಪಡೆಯುತ್ತಿದ್ದಾರೆ. ಸಂಘಟಿತಗೊಂಡು ಹೆಚ್ಚಿನ ಕೂಲಿಯನ್ನು ಪಡೆಯಲು ಸಾಧ್ಯವಾಗಿದೆ. ಕರ್ನಾಟಕ ರಾಜ್ಯದಲ್ಲಿ ಇತರ ಎಲ್ಲ ರಾಜ್ಯಗಳಿಗಿಂತ ಅತೀ ಕಡಿಮೆ ದಿನಗೂಲಿಯನ್ನು ಕೃಷಿ ಕಾರ್ಮಿಕರು ಹೊಂದುತ್ತಿದ್ದಾರೆ. ಅಸಂಖ್ಯಾತ ಅಸಂಘಟಿತ ಕಾರ್ಮಿಕರು ಅತೀ ಕಷ್ಟದಲ್ಲಿ ಜೀವಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಜೀವನಾವಶ್ಯಕ ಕನಿಷ್ಟ ದಿನಗೂಲಿಯನ್ನು ಒತ್ತಾಯಿಸಿ ಕರ್ನಾಟಕ ರಾಜ್ಯದಲ್ಲಿ ಕೃಷಿಕೂಲಿಕಾರರು ಸಂಘಟಿತರಾಗಿ ಹೋರಾಡುವುದು ಅತ್ಯಂತ ತುರ್ತಾದುದಾಗಿದೆ. ಈಗ ಎರಡು-ಮೂರು ವರ್ಷಗಳಿಂದ ಸಂಘಟಿತಗೊಂಡು ಸೀಮಿತ ಮಟ್ಟದಲ್ಲಿ ಹೋರಾಟ ನಡೆಸಿಕೊಂಡು ಬಂದಿದ್ದ "ಕೃಷಿ ವಿಶ್ವವಿದ್ಯಾನಿಲಯ ಕೃಷಿಕಾರ್ಮಿಕ ಸಂಘ (ರಿ)ದ ಆಶ್ರಯದಲ್ಲಿ ಅಕ್ಟೋಬರ್ 6ರಂದು ಧಾರವಾಡದಲ್ಲಿ ಕೃಷಿ ಕೂಲಿಕಾರರ ಸಮಾವೇಶ ಜರುಗಿತು. ಈ ಸಮಾವೇಶ ರಾಜ್ಯದಲ್ಲಿ ಕೃಷಿ ಕೂಲಿಕಾರರು ಜೀವನಾವಶ್ಯಕ ಕನಿಷ್ಟ ದಿನಗೂಲಿಗಾಗಿ ಸುಸಂಘಟಿತ ಹೋರಾ

[ಕಡೇ ಪುಟ ನೋಡಿ]

ಮಹಾರಾಷ್ಟ್ರ ವಾರ್ತೆ :

ಭ್ರಷ್ಟಾಚಾರಿ ಅಂತುಳೆ ಸರಕಾರದ ರಾಜೀನಾಮೆಯ ಬೇಡಿಕೆ

ದೇಶದಾದ್ಯಂತವೂ ಈಗಾಗಲೇ ಸಾಕಷ್ಟು ಕುಖ್ಯಾತಿಗಳಿಸಿದ ಅಂತುಳೆ ಪ್ರಕರಣವು ಇಂದು ದೇಶದಲ್ಲಿನ ಬೂರ್ಜ್ವಾ ರಾಜಕಾರಣ, ಅದರಲ್ಲೂ ಆಳುವ ಪಕ್ಷದ ರಾಜಕಾರಣ ಅದೆಷ್ಟು ಹೇಸಿ ನಾರುತ್ತಿದೆ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ. ಸಂಸತ್ತಿನಲ್ಲಿ ವಿರೋಧಿ ಸದಸ್ಯರು ಹಾಕಿದ ಯಾವುದೇ ಸವಾಲನ್ನೂ ಪ್ರಾಮಾಣಿಕವಾಗಿ, ಜವಾಬ್ದಾರಿಯಿಂದ ಎದುರಿಸದ ಇಂದಿರಾ ಸರಕಾರವು ಕೇವಲ ತನ್ನ ಬಹುಮತದ ದರ್ಪದಿಂದ ಹಾಗೂ ಸುಳ್ಳು, ಚೀರಾಟಗಳ ಬಲದಿಂದ ಜಾರಿಕೊಂಡಿತು. ಮಹಾರಾಷ್ಟ್ರದಿಂದ ಆಳುವ ಪಕ್ಷದ ಇನ್ನೂರಕ್ಕೂ ಮೇಲ್ಪಟ್ಟು ವಿಧಾನಸಭಾ ಸದಸ್ಯರು ಹಾಗೂ ಸಂಪೂರ್ಣ ಮಂತ್ರಿಮಂಡಲ ದಿಲ್ಲಿಗೆ ತೆರಳಿ ರಾಣಿ ಹಾಗೂ ರಾಜಕುಮಾರರ ದರ್ಶನ ಪಡೆದದ್ದು, ಪ್ರಕರಣ ಶುರುವಾಗಿ ಮೂರು ವಾರಗಳಾದರೂ ಅಂತುಳೆಯ ಭವಿಷ್ಯ ಅನಿಶ್ಚಿತವೇ ಆಗಿ ಉಳಿದಿರುವದು, ಅಧಿಕಾರಕ್ಕಾಗಿ ನಡೆದ ನಾಯಿಜಗಳ ಇವೆಲ್ಲವುಗಳಿಂದಾಗಿ ಸಾಮಾನ್ಯ ಮಹಾರಾಷ್ಟ್ರಿಗ ಬೇಜಾರಷ್ಟೇ ಅಲ್ಲ, ಒಳಗೊಳಗೇ ಕುದಿಯುತ್ತಿದ್ದಾನೆ. ಇದಕ್ಕೆ ಒಂದು ಉದಾಹರಣೆಯೆಂದರೆ ದಿನಾಂಕ 9-9-81ರಂದು ಮುಂಬೈಯಲ್ಲಿ ಟ್ರೇಡ್‌ಯೂನಿಯನ್‌ಗಳ ಸಂಯುಕ್ತ ಕ್ರಿಯಾಸಮಿತಿ (TUJAC) ಆಯೋಜಿಸಿದ ಅಭೂತಪೂರ್ವ ಮತಪ್ರದರ್ಶನ. ಸಾವಿರಾರು ಕಾರ್ಮಿಕರು ಅಂದು ಸಂಜೆ ಸರಕಾರದ ಕಾರ್ಮಿಕ ವಿರೋಧಿ ಧೋರಣೆ ಹಾಗೂ ಬೆಲೆಯೇರಿಕೆ ಇವುಗಳ ವಿರುದ್ಧ ಅಷ್ಟೇ ಅಲ್ಲ, ಪ್ರಮುಖವಾಗಿ 'ಅಂತುಳೆ ಪ್ರಕರಣ'ದ ವಿರುದ್ಧ ಹಾಗೂ ಜುಲೈ 24 ರಂದು ಅಂತುಳೆ ಸರಕಾರ ಮುಂಬೈಯಲ್ಲಿ ಸಾವಿರಾರು ಫುಟ್‌ಪಾಥ್ ವಾಸಿಗಳನ್ನು ನಿಷ್ಕರುಣವಾಗಿ ಭೋರ್ಗರೆವ ಮಳೆಯಲ್ಲಿ ನಿರ್ಗತಿಕರನ್ನಾಗಿ ಮಾಡಿದುದರ ವಿರುದ್ಧ ಪ್ರತಿಭಟಿಸಿದರು. ಅಂತುಳೆ ಸರಕಾರದ ರಾಜೀನಾಮೆಯನ್ನು ಕೇಳಿದ್ದಲ್ಲದೇ ಈ ಸಭೆಯಲ್ಲಿ ಸಂಯುಕ್ತ ಕ್ರಿಯಾಸಮಿತಿಯು ಅಕ್ಟೋಬರ್ 17ರಂದು 'ಮಹಾರಾಷ್ಟ್ರ ಬಂದ್' ಯಶಸ್ವಿಯಾಗಿ ಆಚರಿಸುವದಕ್ಕೆ ಕರೆ ಕೊಟ್ಟಿತು.

ಇದಕ್ಕೆ ಮೊದಲು ಜೂನ್ 4ರ ರಾಷ್ಟ್ರೀಯ ಟ್ರೇಡ್‌ಯೂನಿಯನ್ ಸಮ್ಮೇಳನದ ಆದೇಶದ ಮೇರೆಗೆ ಪುಣೆಯಲ್ಲಿ ಆಗಸ್ಟ್ 10ರಂದು ರಾಜ್ಯ ಮಟ್ಟದ ಸಮ್ಮೇಳನ ಯಶಸ್ವಿಯಾಗಿ ಜರುಗಿತು. ದೇಶದಾದ್ಯಂತ ಆಚರಿಸಲಾದ 'ಕಪ್ಪು ದಿನ' ಆಗಸ್ಟ್ 17 ರಂದು ಸೇರಿದ ಪ್ರತಿಭಟನಾ ಸಭೆಯಲ್ಲಂತೂ ಒಂದು ಲಕ್ಷಕ್ಕೂ ಮಿಕ್ಕಿ ಕಾರ್ಮಿಕರು ಸೇರಿದ್ದರು. ಮುಂಬೈಯಲ್ಲಿಯ ಟ್ರೇಡ್‌ಯೂನಿಯನ್ ಚಳುವಳಿಯಲ್ಲಿ ಈಗ ಸಂಭವಿಸುತ್ತಿರುವ ಐಕ್ಯತೆ ಅತ್ಯಂತ ಮಹತ್ವಪೂರ್ಣವಾದುದು. ಪರಿಸ್ಥಿತಿಯ ಒತ್ತಡದಿಂದಾಗಿ ಹಾಗೂ ಸ್ವಾನುಭವದಿಂದಾಗಿ ಮುಂಬೈಯ ಅತ್ಯಂತ ಪ್ರಮುಖ 'ಸ್ವತಂತ್ರ' ಕಾರ್ಮಿಕ ಮುಖಂಡ ಡಾ. ದತ್ತಾ ಸಾಮಂತ ಕೂಡ ಈಗ ಸಂಯುಕ್ತ ಕ್ರಿಯಾ ಸಮಿತಿಯಲ್ಲಿ ಪಾಲ್ಗೊಂಡಿದ್ದಾರೆ. ಅಂತುಳೆ ಸರಕಾರದ ರಾಜೀನಾಮೆ, ಇಂದಿರಾ ಸರಕಾರದ ಧೋರಣೆಗಳ ಖಂಡನೆ ಮುಂತಾದ ನೇರವಾದ ರಾಜಕೀಯ ಬೇಡಿಕೆಯನ್ನು ಎತ್ತಿದ ಮುಂಬೈಯ ಕಾರ್ಮಿಕ ವರ್ಗವು ಈ ಬರುವ ತಿಂಗಳುಗಳಲ್ಲಿ ಮತ್ತಷ್ಟು ವ್ಯಾಪಕವಾದ ರಾಜಕೀಯ ಹೋರಾಟ (ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಹೋರಾಟ) ದಲ್ಲಿ ಭಾಗವಹಿಸಬೇಕಾದ್ದುದರಿಂದ, ಈಗ ಸಂಭವಿಸುತ್ತಿರುವ ಟ್ರೇಡ್ ಯೂನಿಯನ್ ಐಕ್ಯ ಭಾರಿ ಮಹತ್ವ ತಾಳುತ್ತದೆ. ಈ ಸಂದರ್ಭದಲ್ಲಿ ಸಮಾಧಾನಕಾರಕ ವಿಷಯವೇನೆಂದರೆ ಸಂಯುಕ್ತ ಕ್ರಿಯಾಸಮಿತಿಯ ಸ್ಥಾಪನೆ ಹಾಗೂ ಕಾರ್ಯಕ್ರಮಗಳೆರಡರಲ್ಲೂ ಸಿ.ಐ.ಟಿ.ಯು. ಮುಂದಾಳತ್ವ ವಹಿಸುತ್ತಿದೆ. ಮಹಾರಾಷ್ಟ್ರ ರಾಜ್ಯ ಸಿ.ಐ.ಟಿ.ಯು.ವಿನ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ಕೆ. ಕುರಣೆಯವರೇ ಕ್ರಿಯಾಸಮಿತಿಯ ಸಂಚಾಲಕರಾಗಿದ್ದಾರೆ.

ಮಾರ್ಕ್ಸ್‌ವಾದಿ ಪಕ್ಷವು ಸ್ವತಂತ್ರವಾಗಿಯೂ ಕೂಡ ಅಂತುಳೆ ಸರಕಾರದ ವಿರುದ್ಧ ಪ್ರಚಾರ ಶುರು ಮಾಡಿದೆ. ಅಂತುಳೆಯ ಚುನಾವಣಾ ಕ್ಷೇತ್ರವಾದ ಶ್ರೀವರ್ಧನದಲ್ಲಿ ಕಳೆದ ವಾರ ಸಿ.ಪಿ.ಐ (ಎಂ) ಧುರೀಣೆ ಕಾಂ. ಅಹಲ್ಯಾ ರಂಗಣೇಕರ್ ಹಾಗೂ ಇತರರು ಸಂತ್ವಾಡಿ ಸಭೆಗಳನ್ನು ಆಯೋಜಿಸಿದರು. ಹೋದಲ್ಲೆಲ್ಲ ಜನ ಬಹುಸಂಖ್ಯೆಯಲ್ಲಿ ಕೂಡಿ ಅಂತುಳೆ ತನ್ನ ಊರಲ್ಲಿ ತನ್ನ ಸ್ವಂತಕ್ಕಾಗಿ ಅರಮನೆ, ವಿಮಾನ ನಿಲ್ದಾಣ ಇವುಗಳನ್ನು ಕಟ್ಟಿಕೊಳ್ಳುತ್ತಿರುವುದರ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು. ಮುಂಬೈಯಲ್ಲಿಯೂ ಕೂಡ ವಿವಿಧ ಎಡ ಗುಂಪುಗಳು ಬೀದಿ ನಾಟಕ, ಸಭೆ, ಚಿತ್ರಪ್ರದರ್ಶನಗಳನ್ನು ಶುರುಮಾಡಿವೆ. 17-9-81ರಂದು ಸುಮಾರು ಒಂದು ಸಾವಿರ ಫುಟ್‌ಪಾಥ್ ವಾಸಿಗಳು ಕೆಲವು ಎಡ ಕಾರ್ಯಕರ್ತರ ನೇತೃತ್ವದಲ್ಲಿ ಮುಂಬೈಯ ಕುದುರೆ ರೇಸ್ ಮೈದಾನದಲ್ಲಿ ಸುಗ್ಗಿ ಸಾಂಕೇತಿಕವಾಗಿ ಒಂದು ಝೋಪಡಿ ಕಟ್ಟಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಆ ಸಮಯದಲ್ಲಿ 'ಭ್ರಷ್ಟಾಚಾರ ಕೀ ಕ್ಯಾ ಪೆಹಚಾನ್. ಇಂದಿರಾ ಪ್ರತಿಭಾ ಪ್ರತಿಷ್ಠಾನ' ಎಂಬ ನಾಟಕವನ್ನೂ ಆಡಿ ತೋರಿಸಲಾಯಿತು.

ಈಗ ಉಪಲಬ್ಧವಿರುವ ಆಳುವ ಪಕ್ಷದ ಕುಖ್ಯಾತಿ, ಸರಕಾರದ ಅನೇಕ ಜನವಿರೋಧಿ ಧೋರಣೆಗಳಿಂದಾಗಿ ಜನಸಾಮಾನ್ಯರಲ್ಲಿ ಬೆಳೆಯುತ್ತಿರುವ ಅಸಂತೋಷ ಇವುಗಳನ್ನು ಬಳಸಿಕೊಂಡು ಮಹಾರಾಷ್ಟ್ರದಲ್ಲಿ ಎಡಪಂಥೀಯರು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಜೊತೆಗೂಡಿಸಿಕೊಂಡು ವ್ಯಾಪಕ ಜನಆಂದೋಲನವನ್ನು ಎಬ್ಬಿಸಲು ಶಕ್ತರಾಗುವದು ತುಂಬ ಅತ್ಯಗತ್ಯ.

-ಸುಧೀಂದ್ರ ಕುಲಕರ್ಣಿ

ವಾರ್ಷಿಕ ಸಭೆ

22-9-81ರಂದು ಕುಂದಾಪುರ ತಾಲ್ಲೂಕು ಕ್ಷೌರಿಕರ ಸಂಘದ ವಾರ್ಷಿಕ ಮಹಾಸಭೆಯು ಶ್ರೀ ಎನ್. ಕೊರಗ ಭಂಡಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆರಂಭದಲ್ಲಿ ಅಣ್ಣಯ್ಯ ಸುವರ್ಣರು ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ಜಿಲ್ಲಾ ಉಪಾಧ್ಯಕ್ಷ ಯು. ಪಿ. ಸುವರ್ಣರು ಆಗಮಿಸಿದ್ದರು.

ತಾಲ್ಲೂಕಿನಾದ್ಯಂತದ ಹೆಚ್ಚಿನ ಕಸಬುದಾರರು ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

1981-82ನೇ ಸಾಲಿಗೆ ಶ್ರೀ ಎನ್. ಕೊರಗಭಂಡಾರಿ ಅಧ್ಯಕ್ಷರಾಗಿ, ಬಿ. ಮುಂಜುಭಂಡಾರಿ ಕಾರ್ಯದರ್ಶಿಯಾಗಿರುವ ಕಮಿಟಿಯನ್ನು ರಚಿಸಲಾಯಿತು.

1982 ಏಪ್ರಿಲ್‌ನಲ್ಲಿ ಕಿಸಾನ್‌ಸಭಾ ಸಮ್ಮೇಳನ

ಸೆಪ್ಟೆಂಬರ್ 12 ಮತ್ತು 13 ರಂದು ದೆಹಲಿಯಲ್ಲಿ ಸೆಂಟ್ರಲ್ ಕಿಸಾನ್ ಕಮಿಟಿ (ಸಿ. ಕೆ. ಸಿ)ಯು ಸಭೆ ಸೇರಿ 1982 ಏಪ್ರಿಲ್‌ನಲ್ಲಿ ಅಖಿಲಭಾರತ ಕಿಸಾನ್‌ಸಭಾ ಸಮ್ಮೇಳನವನ್ನು ಪ. ಬಂಗಾಳದಲ್ಲಿ ನಡೆಸುವ ತೀರ್ಮಾನ ಕೈಗೊಳ್ಳಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಅಖಿಲ ಭಾರತ ಕಿಸಾನ್‌ಸಭಾ ಅಧ್ಯಕ್ಷರಾದ ಕಾಂ. ಬಿನೋಯ್ ಕೃಷ್ಣ ಚೌಧರಿಯವರು ವಹಿಸಿದ್ದರು.

ದೇಶದ ಹಲವು ಭಾಗ (ರಾಜಸ್ಥಾನ, ಕರ್ನಾಟಕ, ಮಹಾರಾಷ್ಟ್ರ, ಯು. ಪಿ., ಗುಜರಾತ್, ಪಂಜಾಬ್ ಮತ್ತು ಆಂಧ್ರಪ್ರದೇಶ) ಗಳಲ್ಲಿ ಭೀಕರ ಬರಗಾಲದಿಂದ ಉಂಟಾದ ಗಂಭೀರ ಪರಿಸ್ಥಿತಿಯ ಕುರಿತು ಸಿ. ಕೆ. ಸಿ. ವಿಮರ್ಶೆ ವ್ಯಕ್ತಪಡಿಸಿತು. ಕೇಂದ್ರ ಸರಕಾರ ತಕ್ಷಣ ಈ ಕಡೆ ಗಮನಹರಿಸಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಪಡಿಸಲಾಯಿತು.

ಪರಿಹಾರ ಕಾಮಗಾರಿಗಳು ಸೂಕ್ತವಾಗಿ ನಡೆಯುವಂತೆ ನೋಡಿಕೊಳ್ಳಲು ರಾಜ್ಯವಾರು, ಜಿಲ್ಲಾವಾರು ಮತ್ತು ತಾಲ್ಲೂಕುವಾರು ಎಲ್ಲ ಪಕ್ಷಗಳ, ಕಿಸಾನ್‌ಸಭಾ ಮತ್ತು ಕೃಷಿ ಕಾರ್ಮಿಕ ಪ್ರತಿನಿಧಿಗಳನ್ನೊಳಗೊಂಡ ತಂಡಗಳನ್ನು ರಚಿಸಲು ಸಿ.ಕೆ.ಸಿ. ಒತ್ತಾಯಿಸಿದೆ.

ಆರಂಭದಲ್ಲಿ ಕಾಂ. ಭೂಪೇಶ್ ಗುಪ್ತಾ, ಎ. ಬಾಲಸುಬ್ರಮಣ್ಯಂ ಮತ್ತು ಅಚಾರಸಿಂಗ್ ಛಿನ್ನಾ (ಕಿಸಾನ್ ಸಭಾದ ಪಂಜಾಬ್ ಘಟಕದ ಮಾಜೀ ಅಧ್ಯಕ್ಷ) ಇವರುಗಳ ನಿಧನದ ಕುರಿತು ಸಂತಾಪ ವ್ಯಕ್ತಪಡಿಸಲಾಯಿತು.

ಪ. ಬಂಗಾಳ, ಕೇರಳ ಮತ್ತು ತಮಿಳುನಾಡು ಭೂಮಸೂದೆಗಳಿಗೆ ಅನುಮತಿ ನೀಡುವಲ್ಲಿ ರಾಷ್ಟ್ರಪತಿಯವರು ಮೀನಮೇಷ ಎಣಿಸುತ್ತಿರುವುದನ್ನು ಸಿ. ಕೆ. ಸಿ. ಉಗ್ರವಾಗಿ ಖಂಡಿಸಿತು. ಈ ಕುರಿತು ಒತ್ತಾಯಿಸಿ ಸಿ. ಕೆ. ಸಿ. ತನ್ನ ರಾಜ್ಯಘಟಕಗಳಿಗೆ ಕರೆ ನೀಡಿದೆ.

ಕಳೆದ ನವೆಂಬರ್ (1980) ನಲ್ಲಿ ಕೇರಳದ ತ್ರಿಚೂರನಲ್ಲಿ ನಡೆದ ಸಿ.ಕೆ.ಸಿ. ಮೀಟಿಂಗ್ ನಂತರದ ಕಿಸಾನಸಭಾ ಚಟುವಟಿಕೆ ಕುರಿತು ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿಮಾಸ್ಟರ್ ಅವರ ವರದಿಯು ಕುರಿತು ಚರ್ಚಿಸಲಾಯಿತು.

ಕಾಂ. ಶಾಂತಿಮೋಯ್‌ಘೋಷ (ಪ. ಬಂಗಾಲ), ರಾಂಧ್ವಾ (ಪಂಜಾಬ್), ಸುಭೋದ್‌ರಾಯ್ (ಬಿಹಾರ್), ಸಮರ್ ಚೌಧರಿ (ತ್ರಿಪುರಾ), ಎನ್. ಶಂಕ್ರಯ್ಯ (ತಮಿಳುನಾಡು), ಟಿ.ವಿ.ಆರ್. ಚಂದ್ರಂ ಮತ್ತು ಯು. ರಾಮು (ಆಂಧ್ರಪ್ರದೇಶ), ಪಿ. ರಾಮಚಂದ್ರರಾವ್ (ಕರ್ನಾಟಕ), ಗೋದಾವರಿ ಪರುಳೇಕರ್ (ಮಹಾರಾಷ್ಟ್ರ) ರಾಜ್‌ಕಿಶೋರ್ (ಯು.ಪಿ.), ಎನ್. ತಲುಖ್‌ದಾರ್ (ಅಸ್ಸಾಂ), ಹರಿರಾಂ ಚೌಹಾನ್ (ರಾಜಸ್ಥಾನ) ಮತ್ತು ಮಹಿಮುನ್ ದೇಸಾಯಿ (ಗುಜರಾತ್) ಈ ಮೊದಲಾದವರು ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಕಾಂ. ಹರೇಕಿಶನ್‌ಸಿಂಗ್‌ಸುರಜೀತ್ (ಎಂ. ಪಿ.) ಮತ್ತು ಕಾಂ. ಎಂ. ಬಸವಪುನ್ನಯ್ಯ ಇವರುಗಳು ದೇಶದ ರೈತಾಪಿವರ್ಗದ ಸಮಸ್ಯೆಗಳ ಕುರಿತು ವಿವರಿಸಿದರು.

ಕೃಷಿಕೂಲಿಕಾರರ ಅಖಿಲಭಾರತ ಮಟ್ಟದ ಸಂಘಟನೆ ಪ್ರಾರಂಭಿಸಲು ಸಿ. ಕೆ. ಸಿ. ನಿರ್ಧರಿಸಿದೆ.

31 ಮಾರ್ಚ್ 1982ರೊಳಗಾಗಿ ಎಲ್ಲ ರಾಜ್ಯಘಟಕಗಳು ತಮ್ಮ ಸಮ್ಮೇಳನಗಳನ್ನು ಪೂರೈಸಬೇಕೆಂದು ಸಿ.ಕೆ.ಸಿ. ಮನವಿ ಮಾಡಿದೆ.

○

ಧರ್ಮದ ಹೆಸರಿನಲ್ಲಿ ಮಹಿಳೆಯರ ಮೇಲೆ ನಿಬಂಧನೆ

ಇಸ್ಲಾಮಿಕ್ ಫಂಡಮೆಂಟಲಿಸಂ (ಮತಾಂಧತೆ) ಅನೇಕ ಮುಸ್ಲಿಮ್ ಮತ್ತು ಅರಬ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಬೇರೂರಿದೆ. ಧರ್ಮದ ಹೆಸರಿನಲ್ಲಿ ಸರ್ವಾಧಿಕಾರ, ನಿರಂಕುಶ ಆಡಳಿತಗಳನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಮಹಿಳೆಯರ ಸ್ವಾತಂತ್ರ್ಯವನ್ನು ಕಸಿಯಲಾಗುತ್ತಿದೆ. ಮತಾಂಧತೆಯ ಪ್ರಭಾವವು ನಮ್ಮ ದೇಶದಲ್ಲೂ ಹರಡುತ್ತಿದೆ. ಹಿಂದು ಜಾತೀಯವಾದಿ ಮತ್ತು ಮತೀಯವಾದಿಗಳು ಒಂದೆಡೆ ಭಯಾನಕವಾಗಿ ಬೆಳೆಯುತ್ತಿರುವಾಗ, ಮುಸ್ಲಿಂ ಮತೀಯವಾದವೂ ಬಲವಾಗಿ ರೂಪಿತವಾಗುತ್ತಿದೆ. ನಮ್ಮ ರಾಜ್ಯದಲ್ಲೂ ಇದು ಅಲ್ಲಲ್ಲಿ ತಲೆ ಎತ್ತುತ್ತಿದೆ.

ರಾಯಚೂರಿನಲ್ಲಿ ತಾ. 6-9-81 ರಂದು ಈದ್‌ಗಾ ಮೈದಾನದಲ್ಲಿ ಮುಸ್ಲಿಂ ಯುವಸಂಘಟನೆಯೆಂಬ ಹೆಸರಿನಲ್ಲಿ ಅಂದು ಸಭೆ ಸೇರಿದ್ದಿತು. ಮೊದಲೇ ಅನೇಕ ಕಟ್ಟುನಿಟ್ಟುಗಳಿಂದ ಬಂಧಿಸಲ್ಪಟ್ಟಿರುವ ಮುಸ್ಲಿಂ ಮಹಿಳೆಯರ ಮೇಲೆ ಇನ್ನೂ ಹೆಚ್ಚು ನಿರ್ಬಂಧಗಳನ್ನು ಹೇರಲು ತೀರ್ಮಾನಿಸಲಾಯಿತಂತೆ. ಸಿನೆಮಾ ನೋಡುವ ಮುಸ್ಲಿಂ ಮಹಿಳೆಯರ ಜಡೆ ಕತ್ತರಿಸಿ, ಮೂಗು ಕೊಯ್ದು, ಸಾಮಾಜಿಕ ಬಹಿಷ್ಕಾರ ಹಾಕಬೇಕೆಂದು ಈ ಮಹಾ ಸಭೆ ತೀರ್ಮಾನಿಸಿದೆ ಎಂಬ ವಾರ್ತೆ ಬಂದಿದೆ.

ಈ ಕ್ರೂರ, ಪ್ರತಿಗಾಮಿ ವಿಚಾರವನ್ನು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು ರಾಯಚೂರು ಘಟಕವು ಉಗ್ರವಾಗಿ ಖಂಡಿಸಿದೆ. ಹೆಣ್ಣು ಕೀಳು ಎಂಬ ಮನೋಭಾವನೆ ಬೆಳೆಸಲು ಯತ್ನಿಸುವ ಬದಲು ಸಮಾಜದಲ್ಲಿರುವ ಅನ್ಯಾಯ, ಅಸಮಾನತೆಗಳನ್ನು ಕಿತ್ತೊಗೆಯಲು ಎಲ್ಲಾ ಜಾತಿ, ಜನಾಂಗ ಮತ್ತು ಮತಗಳಿಗೆ ಸೇರಿದ ಶೋಷಿತ ಮಹಿಳೆಯರೂ ಮತ್ತು ಪುರುಷರೂ ಒಂದಾಗಿ ಹೋರಾಡಲು ಮಹಿಳಾಸಂಘಟನೆ ಕರೆ ನೀಡಿದೆ.

○

ಭೂನ್ಯಾಯ ಮಂಡಳಿಗಳಲ್ಲಿ ಅಕ್ರಮ

ಭೂನ್ಯಾಯ ಮಂಡಳಿಗಳಲ್ಲಿ ಅಕ್ರಮವಾಗುತ್ತಿರುವುದು ಹೊಸತೇನಲ್ಲ. ಕಾಂಗ್ರೆಸ್ ಪುಡಾರಿಗಳಿಗೊಂದು ಕೆಲಸ ಒದಗಿಸಿರುವ ಈ ನ್ಯಾಯ ಮಂಡಳಿಗಳಿಂದ "ನ್ಯಾಯ"ವನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ.

ದ.ಕ. ಜಿಲ್ಲೆಯ ಸುಳ್ಯ ತಾಲ್ಲೂಕಿನ ನ್ಯಾಯಮಂಡಳಿಯಲ್ಲಿ ಈ ತರಹದ ಅಕ್ರಮಗಳು ಪರಾಕಾಷ್ಟೆಗೆ ತಲುಪಿವೆ. ವ್ಯಾಪಕ ಭ್ರಷ್ಟಾಚಾರ ಮತ್ತು ಲಂಚಗುಳಿತನ ತಾಂಡವವಾಡುತ್ತಿದೆ. ಸರ್ಕಾರದ ಭೂಸುಧಾರಣಾ ಕಾನೂನು ಮತ್ತು ನಿಯಮಗಳನ್ನು ನಂಬಿ ಬಡ ಗೇಣಿದಾರರಿಗೆ ಪಂಗನಾಮ ಬೀಳುತ್ತಿದೆ. ತಾಲ್ಲೂಕಿನ ಬಹುತೇಕ ಒಕ್ಕಲುಗಳಿಗೆ ಯಾವುದೇ ರೀತಿಯ ದಾಖಲೆ ಲಭ್ಯವಾಗುತ್ತಿಲ್ಲ. ಮುಖ್ಯವಾಗಿ ಪಹಣಿಪತ್ರಗಳಲ್ಲೂ ಗೇಣಿದಾರರ ಹೆಸರನ್ನು ದಾಖಲೆ ಮಾಡದೆ ಭೂಮಾಲಕರ ಹೆಸರುಗಳನ್ನೇ ದಾಖಲೆ ಮಾಡಿರುವುದೂ ಕಂಡುಬರುತ್ತಿವೆ.

ಭೂನ್ಯಾಯಮಂಡಳಿಗಳಿಗೆ ಅಲೆದಾಡಿದ ರೈತರು ತಮ್ಮ ಸಾಗುವಳಿ ಮತ್ತು ಸ್ವಾಧೀನವಿರುವ ಸ್ಥಳಗಳನ್ನು ತನಿಖೆಮಾಡಿ ಅದರ ಆಧಾರದ ಮೇಲೆ ಪರಿಶೀಲಿಸಬೇಕೆಂದೂ, ಗ್ರಾಮಲೆಕ್ಕಿಗರಿಂದ ಸ್ಥಳದ ಸರಿಯಾದ ಮಾಹಿತಿದೊರೆಯದೆ ಭೂನ್ಯಾಯಮಂಡಳಿಯಲ್ಲಿ ತಿದ್ದುಪಡಿ ಅರ್ಜಿಗಳನ್ನು ಮತ್ತು ಸಾಕ್ಷಿದಾರರನ್ನು ಹಾಜರುಪಡಿಸಿದ್ದಾರೆ. ಇವಾವನ್ನೂ ಗಮನಕ್ಕೆ ತೆಗೆದುಕೊಳ್ಳದೇ ಭೂಮಾಲಕರ ಪರವಾಗಿ ತೀರ್ಪುಗಳನ್ನು ನೀಡಲಾಗಿದೆ. ಗೇಣಿದಾರರಿಗೆ ಭೂಮಿಯ ಗೇಣಿದಾರನಾಗಿ ನೊಂದಾಯಿಸಿದ ಪ್ರಕರಣಗಳಲ್ಲಿ ಬಹುತೇಕವಾಗಿ ಭೂಮಿಗಳಿಗೆ ಅವನನ್ನು ಸಾಗುವಳಿದಾರನಾಗಿ ನೊಂದಾಯಿಸದೇ ಅಲ್ಪ ಸ್ವಲ್ಪ ಭೂಮಿಗಳಿಗೆ ಮಾತ್ರ ಸಾಗುವಳಿದಾರರನ್ನಾಗಿ ನೊಂದಾಯಿಸಲಾಗುತ್ತಿದೆ.

ಸುಳ್ಯಗ್ರಾಮದೊಳಗಿರುವ ಕೃಷಿ ಭೂಮಿಯನ್ನು (ದಾಖಲೆ ಪ್ರಕಾರ ಕೃಷಿಭೂಮಿಯೆಂದು ನಮೂದಿಸಿರುವ) ಕೃಷಿಯೇತರ ಭೂಮಿಯೆಂದೂ ಸ್ಥಳ ಪರಿಶೀಲಿಸದೆ ಘೋಷಿಸಿರುವುದಂತೂ ನ್ಯಾಯಕ್ಕೆ ವಿರುದ್ಧ. ಉದಾಹರಣೆಗೆ ಧರ್ಮಸ್ಥಳಕ್ಕೆ ಸೇರಿದ ಸುಮಾರು 164 ಸಾಗುವಳಿದಾರರ ಕುಟುಂಬಗಳನ್ನು ಈ ವ್ಯಾಪ್ತಿಗೊಳಪಡಿಸಿ ಅವರ ಅರ್ಜಿಗಳನ್ನು ತಳ್ಳಿಹಾಕಲಾಗಿದೆ.

ಸುಳ್ಯ ತಾಲ್ಲೂಕು ರೈತಸಂಘವು ಈ ಎಲ್ಲ ವಿಷಯ ಕುರಿತು ಧ.ಕ. ಜಿಲ್ಲಾ ವಿಶೇಷ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದೆ. ಸುಳ್ಯ ತಾಲ್ಲೂಕಿನಲ್ಲಿ ಭೂನ್ಯಾಯ ಮಂಡಳಿಗಳು ತಿರಸ್ಕರಿಸಿದ ಎಲ್ಲಾ ಗೇಣಿದಾರರ ಅರ್ಜಿಗಳ ಪುನರ್ ತನಿಖೆಯಾಗಬೇಕೆಂದೂ, ಪುನರ್ ತನಿಖೆ ನಡೆದಾಗ ರೈತಸಂಘದ ಪ್ರತಿನಿಧಿಗಳನ್ನೂ ಭೂನ್ಯಾಯಮಂಡಳಿಗಳಲ್ಲಿ ಸೇರಿಸಬೇಕೆಂದೂ ಕೇಳಿಕೊಂಡಿದೆ.

ಮನವಿಯನ್ನು ತುರ್ತಾಗಿ ಪರಿಶೀಲಿಸಿ ತೀವ್ರಕ್ರಮ ತೆಗೆದುಕೊಳ್ಳಬೇಕೆಂದೂ ರೈತಸಂಘ ವಿಶೇಷ ಜಿಲ್ಲಾಧಿಕಾರಿಗಳನ್ನು ವಿನಂತಿಸಿದೆ. ಇವರು ತೀವ್ರಕ್ರಮ ಕೈಗೊಳ್ಳುವಲ್ಲಿ ವಿಫಲರಾದಲ್ಲಿ 19-10-81ರಿಂದ ಚಳುವಳಿ ಪ್ರಾರಂಭಿಸುವ ಕಾರ್ಯಕ್ರಮವನ್ನು ಸುಳ್ಯ ತಾಲ್ಲೂಕು ರೈತಸಂಘವು ಹಾಕಿಕೊಂಡಿದೆ.

ಬಹಿರಂಗ ಸಭೆ

ಚಹಾತಿಂಡಿಗಳ ದರ ಗಗನಕ್ಕೇರಿರುವುದನ್ನು ಪ್ರತಿಭಟಿಸಿ ದಿನಾಂಕ 1-10-81ರಂದು ಶಿರಸಿಯ ಬಿಡ್ಕಿಬೈಲಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಎಸ್. ಧಾರೇಶ್ವರ ವಹಿಸಿದ್ದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಕಾಂ. ಮಂಜುನಾಥ ಪುಲಕರರು ಮಾತನಾಡಿ ತಿಂಡಿತೀರ್ಥಗಳ ಬೆಲೆಯನ್ನು ಸಮಂಜಸವಾಗಿ ಇಳಿಸದಿದ್ದರೆ ಚಳುವಳಿ ಹೂಡಬೇಕಾದೀತೆಂದು ಎಚ್ಚರಿಸಿದರು.

ಕಾರ್ಯಕ್ರಮವನ್ನು ಬೆಂಬಲಿಸಿ ಜನತಾಪಕ್ಷದ ಉ. ಕ. ಕನ್ನಡ ಜಿಲ್ಲಾ ಕಾರ್ಯದರ್ಶಿ ಹೆರವಟ್ಟಾ ಮತ್ತು ಡಾ|| ರಾಯಕರ ಮೊದಲಾದವರು ಮಾತನಾಡಿ ಹೋಟೆಲ್ ಮಾಲೀಕರು ಮಾಡುತ್ತಿರುವ ಸುಲಿಗೆಯನ್ನು ಖಂಡಿಸಿದರು.

ಸತ್ಕಾರ ಕೂಟ

ದಿನಾಂಕ 2-10-81ರಂದು ಹರಿಹರದ ಕಿರ್ಲೋಸ್ಕರ ಕಾರ್ಮಿಕ ಸಂಗಾತಿಗಳು ಇತ್ತೀಚಿಗೆ ಮದುವೆಯಾದ ಕಾಂ. ಇಕ್ಬಾಲ್ ಹುಸೇನ್ ಮತ್ತು ಕೆ. ಶರೀಫಾ ಇವರ ಗೌರವಾರ್ಥ ಸತ್ಕಾರಕೂಟವನ್ನಿಟ್ಟುಕೊಂಡಿದ್ದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಕಾಂ. ಕೆ. ಎಂ. ಕೊಟ್ರಯ್ಯನವರು ವಹಿಸಿದ್ದರು. ಕಾಂ. ಆರ್. ಬಿ. ಅಂಗಡಿ, ಆರ್. ಸಿ. ಉನ್ನಿತ್ತನ್, ಭೀಮಪ್ಪ ರೆಡ್ಡಿ, ಎನ್. ಜಿ. ಪಠಾಣ ಮೊದಲಾದವರು ಮಾತನಾಡಿ ದಂಪತಿಗಳಿಗೆ ಶುಭ ಹಾರೈಸಿದರು.

ಕಿರ್ಲೋಸ್ಕರ್ ಕಾರ್ಮಿಕ ಸಂಗಾತಿಗಳು ಈ ಶುಭ ಸಂದರ್ಭದಲ್ಲಿ, ಕಾಂ. ಇಕ್ಬಾಲ್ ಹುಸೇನ್‌ರಿಗೆ ವಕೀಲ ವೃತ್ತಿಗೆ ನೊಂದಾಯಿಸಲು ಹಣ ಸಂಗ್ರಹ ಮಾಡಿದ್ದನ್ನು ಕೊಡುಗೆಯಾಗಿ ನೀಡಿದರು.

ಕಾಂ. ಇಕ್ಬಾಲ್ ಮತ್ತು ಶರೀಫಾ ಮಾತನಾಡಿ ಕಾರ್ಮಿಕ ಸೋದರರಿಗೆ ಕೃತಜ್ಞತೆ ಸಲ್ಲಿಸಿದರು.

ಬೀಡಿ ಕಾರ್ಮಿಕರ ಧರಣಿ

ರಾಜ್ಯ ಬೀಡಿ ಫೆಡರೇಷನ್ನಿನ ಕರೆಯಂತೆ ದಿನಾಂಕ 26-9-81 ರಂದು ಮುಳುಬಾಗಿಲು ತಾಲ್ಲೂಕು ಆಫೀಸೆದುರು ಬೀಡಿಕಾರ್ಮಿಕರು ತಮ್ಮ ಬೇಡಿಕೆಗಳಿಗೋಸ್ಕರ ಒತ್ತಾಯಿಸಿ ಧರಣಿ ಸತ್ಯಾಗ್ರಹ ಹೂಡಿದರು.

ಧರಣಿ ಸತ್ಯಾಗ್ರಹದ ಮೊದಲು ಬೀಡಿಕಾರ್ಮಿಕರು ಮೆರವಣಿಗೆ ಹೊರಡಿಸಿದ್ದರು. ನಂತರ ಕಾಂ. ಎಂ. ಸಮೀಉಲ್ಲಾ, ಇನಾಯತುಲ್ಲಾ, ಪ್ಯಾರೇಜಾನ್ ಇವರುಗಳ ನೇತೃತ್ವದಲ್ಲಿ ನಿಯೋಗವೊಂದು ತಹಶೀಲ್ದಾರರನ್ನು ಭೇಟಿಮಾಡಿ ಮನವಿ ಅರ್ಪಿಸಿತು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ವೆಂಕಟರಾಮಯ್ಯನವರು ಮಾತನಾಡಿ ಕನಿಷ್ಟ ಕೂಲಿ ಜಾರಿಗಾಗಿ ಒತ್ತಾಯಿಸಿದರು.

ವಿಚಾರ ಸಂಕಿರಣ

27-9-81ರಂದು ದ. ಕ. ಜಿಲ್ಲೆಯ ವಿಟ್ಲದ ಜ್ಯೂನಿಯರ್ ಕಾಲೇಜಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆ (ಕರಾವಳಿವಲಯ)ಯ ಆಶ್ರಯದಲ್ಲಿ "ಮೀಸಲಾತಿ" ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಬಂಟ್ವಾಳ ಎಸ್. ವಿ. ಎಸ್. ಕಾಲೇಜಿನ ಇಂಗ್ಲೀಷ್ ಉಪನ್ಯಾಸಕರಾದ ಶ್ರೀ ವಿ. ಪುರುಷೋತ್ತಮ ವಹಿಸಿದ್ದರು.

ಪುತ್ತೂರಿನ ವಿವೇಕಾನಂದ ಕಾಲೇಜಿನ ಉಪನ್ಯಾಸಕರಾದ ಶ್ರೀ ಎಸ್. ರಾಜಾರಾಮ ತೋಳ್ಪಾಡಿ ಅವರು ಪ್ರಬಂಧ ಮಂಡಿಸಿದರು.

ಕೊನೆಯಲ್ಲಿ ಅನಂತಕೃಷ್ಣ ಅವರು ವಂದಿಸಿದರು. ●

ಎಸ್. ಎಫ್. ಐ. ಚಟುವಟಿಕೆಗಳು

ಹೊಸಪೇಟೆ

ಸೆಪ್ಟೆಂಬರ್ 20 ರಂದು ಹೊಸಪೇಟೆಯ ಅನಂತಶಯನ ಗುಡಿ ಎಸ್. ಎಫ್. ಐ. ಘಟಕದ ಸಭೆ ಸೇರಿತ್ತು. ಕಾಂ. ಶಾಂತಕುಮಾರಿ, ಕಾಸೀಮ್, ರಾಮನಾಥ, ಪಾಂಡು ಮತ್ತು ಕಾಂ. ಗುಡಿಹಳ್ಳಿ ನಾಗರಾಜ್ ಇವರುಗಳು ಹೊಸಪೇಟೆಯ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಿದರು.

ಸೆಪ್ಟೆಂಬರ್ 21ರಂದು ಇಲ್ಲಿಯ ಬಿ. ಸಿ. ಹಾಸ್ಟೆಲ್‌ನಲ್ಲಿ ಎಸ್. ಎಫ್. ಐ. ಸಭೆ ಸೇರಿಸಿ ಹಲವಾರು ಪ್ರಸ್ತುತ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಕಾಂ. ವೆಂಕೋಬ್, ಗುಡಿಹಳ್ಳಿ ನಾಗರಾಜ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಹೂವಿನಹಡಗಲಿ

ಅಕ್ಟೋಬರ್ 1ರಂದು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ ಕಾಂ. ಕೆ. ಶರೀಫಾ ಮತ್ತು ಕಾಂ. ನಾಗರಾಜ್ ಇವರ ನೇತೃತ್ವದಲ್ಲಿ ಸಭೆ ಸೇರಿ ಸಂಘಟನೆ ಕುರಿತು ಚರ್ಚಿಸಲಾಯಿತು. ಹಾಗೂ ಎಸ್.ಎಫ್.ಐ. ಸ್ಥಳೀಯ ಘಟಕದಪದಾಧಿಕಾರಿಗಳನ್ನು ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಟಿ. ಶಶಿಧರ, ಉಪಾಧ್ಯಕ್ಷರಾಗಿ ಎಚ್. ಕೊಟ್ರೇಶ್, ಪ್ರಧಾನಕಾರ್ಯದರ್ಶಿಯಾಗಿ ಡಿ. ಎಸ್. ಜಾಫರ್, ಸಹಕಾರ್ಯದರ್ಶಿಗಳಾಗಿ ಶಾಂತರಾಜ್ ಮತ್ತು ವೈ. ಗುಂಗಣ್ಣ ಮತ್ತು ಖಜಾಂಚಿಯಾಗಿ ಎಂ. ಬಿ. ರಮೇಶ್ ಆಯ್ಕೆಯಾಗಿದ್ದಾರೆ.

ಹರಪನಹಳ್ಳಿ

ಕಳೆದ ಸೆಪ್ಟೆಂಬರ್ 27ರಂದು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ವಿದ್ಯಾರ್ಥಿಗಳ ಮತ್ತು ಕಾಲೇಜಿನ ಚುನಾಯಿತ ಅಭ್ಯರ್ಥಿಗಳ ಸಭೆ ಸೇರಿಸಲಾಗಿತ್ತು. ಹಲವಾರು ಕಾಲೇಜುಗಳಿರುವ ಹರಪನಹಳ್ಳಿಯಲ್ಲಿ ಎಸ್. ಎಫ್. ಐ. ಘಟಕ ಪ್ರಾರಂಭಿಸುವ ಅಗತ್ಯತೆಯ ಬಗ್ಗೆ ಚರ್ಚಿಸಲಾಯಿತು.

ಅಕ್ಟೋಬರ್ 2ರಂದು ಪುನಃ ಸಭೆ ಸೇರಿಸಲಾಯಿತು. ಕಾಂ. ಎಸ್.ಎಸ್. ಹಿರೇಮಠ ಮತ್ತು ಡಿ. ಎಸ್. ಜಾಫರ ಇವರು ಎಸ್. ಎಫ್. ಐ. ಸಂಘಟನೆ ಕುರಿತು ವಿವರಿಸಿದರು. ನಂತರ ಎಸ್. ಎಫ್. ಐ. ಘಟಕವೊಂದನ್ನು ರಚಿಸಿ ಈ ಕೆಳಕಂಡವರನ್ನು ಪದಾಧಿಕಾರಿಗಳಾಗಿ ಆಯ್ಕೆಮಾಡಲಾಯಿತು.

ಸಂಚಾಲಕರಾಗಿ ರಾಜಾಸಾಹೇಬ್, ಉಪಸಂಚಾಲಕರಾಗಿ ರುದ್ರಗೌಡ ಹಾಗೂ ಮಂಜುನಾಥ ಮತ್ತು ಖಜಾಂಚಿಯಾಗಿ ಉಳ್ಳೇಶ್ವರ ಆಯ್ಕೆಯಾಗಿದ್ದಾರೆ. ●

ನೂತನ ಸಂಘ ಸ್ಥಾಪನೆ

ಕೋಲಾರ ಜಿಲ್ಲಾ ಮುಳುಬಾಗಿಲುನಲ್ಲಿ ದಿನಾಂಕ 1-10-81ರಂದು ಮೋಟಾರ್ ವರ್ಕರ್ಸ್ ಯೂನಿಯನ್ನು ರಚಿಸಲಾಯಿತು.

ನೂತನವಾಗಿ ರಚಿತವಾದ ಈ ಸಂಘಕ್ಕೆ ಕಾಂ. ಎಂ. ಸಮೀಉಲ್ಲಾ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಎ. ಅಬ್ದುಲ್ಲಾ, ಸಹಕಾರ್ಯದರ್ಶಿಗಳಾಗಿ ಕಾಂ. ಸೀನಪ್ಪ ಮತ್ತು ಅಜೀಜ್, ಖಜಾಂಚಿಯಾಗಿ ಕಾಂ. ನೂರುಲ್ಲಾ ಖಾನ್ ಇವರುಗಳು ಚುನಾಯಿತರಾಗಿದ್ದಾರೆ.

ಮೋಟಾರ್ ಕಾರ್ಮಿಕರ ಸ್ಥಿತಿಗತಿ ಕುರಿತು, ವೇತನ ಪರಿಷ್ಕರಿಸುವ ಅಗತ್ಯತೆ ಕುರಿತು ಕಾಂ. ಅಬ್ದುಲ್ ಮಜೀದ್ ಮತ್ತು ಆರ್. ವೆಂಕಟ್ರಾಮಯ್ಯ ಮಾತನಾಡಿದರು. ●

ಸಂಘದ ಕಚೇರಿ ಮೇಲೆ ದಾಳಿ

2-10-81ರಂದು ಮಂಗಳೂರಿನ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್‌ನ ಕಚೇರಿ ಮೇಲೆ ವಿನಾಕಾರಣ ದಾಳಿಮಾಡಿ, ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಭುಜಂಗ ಮಾರ್ಲರ ಸಹಿತ ಇತರ ಕೆಲವು ಕಾರ್ಯಕರ್ತರನ್ನು ಥಳಿಸಿ, ಅವರನ್ನೆಲ್ಲಾ ಬಂಧಿಸಿದ್ದಾರೆ.

ಪೋಲೀಸರ ಈ ಅನುಚಿತ ಕ್ರಮವನ್ನು ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿ ತೀವ್ರವಾಗಿ ಖಂಡಿಸಿ, ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದೂ ಒತ್ತಾಯಿಸಿದೆ. ○

ಅದಮ್ಯ ಚೇ ಗೆವಾರ

ಡಾ॥ ಜಿ. ರಾಮಕೃಷ್ಣ

[ಚೇ ಕುರಿತು ಡಾ. ಜಿ. ಆರ್.ರ ಈ ಲೇಖನ ಮೊದಲು ಜುಲೈ 1973ರ ಪ್ರಜಾಮತ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಕಳೆದ ಹತ್ತು ವರ್ಷಗಳಲ್ಲಿ ಬೇರೆಬೇರೆ ಕಡೆಗಳಲ್ಲಿ ಪ್ರಕಟವಾಗಿದ್ದ ಡಾ. ಜಿ. ಆರ್.ರ ಲೇಖನಗಳ ಪೈಕಿ ಕೆಲವನ್ನು ಸೇರಿಸಿ "ಮುನ್ನೋಟ" ಎಂಬ ಲೇಖನ ಸಂಕಲನ ಪ್ರಕಟವಾಗಿದೆ.

"ಅದಮ್ಯ ಚೇ ಗೆವಾರ" ಈ ಲೇಖನವನ್ನು ಮುನ್ನೋಟದಿಂದ ಆಯ್ದುಕೊಳ್ಳಲಾಗಿದೆ].

ಬೊಲಿವಿಯಾದ ಮಿಲಿಟರಿ ದಂಡನಾಯಕ ಬ್ಯಾರಿಯೆಂಟೋಸ್ ಸೆಪ್ಟೆಂಬರ್ 11, 1967ರಂದು ರೇಡಿಯೋ ಪ್ರಸಾರದಲ್ಲಿ ಚೇ ಗೆವಾರ ಆಗಲೇ ಮಡಿದಿದ್ದಾನೆಂದೂ, ಆತನ ಕ್ರಾಂತಿಕಾರೀ ಹೋರಾಟದ ಸಮಾಚಾರಗಳೆಲ್ಲಾ ಶುದ್ಧ ಸುಳ್ಳೆಂದೂ ನುಡಿದು ಚೇ ಗೆವಾರಾಗೆ ಸಂಬಂಧಿಸಿದ ಪ್ರತೀತಿಗಳೆಲ್ಲಾ ಕೇವಲ ಪ್ರಚಾರವೆಂದು ಅಲ್ಲಗಳೆದಿದ್ದ. ಆದರೂ ಸತ್ತ ಅಥವಾ ಬದುಕಿರುವ ಚೇ ಗೆವಾರಾನನ್ನು ಪತ್ತೆಹಚ್ಚಲು ಸಹಾಯಕವಾಗುವ ಯಾವುದೇ ಮಾಹಿತಿಯನ್ನು ದೊರಕಿಸಿಕೊಡುವ ವ್ಯಕ್ತಿಗೆ 50,000 ಬೊಲಿವಿಯನ್ ಡಾಲರುಗಳ ಬಹುಮಾನ ನೀಡಲಾಗುವುದೆಂದು ಪ್ರಸಾರ ಮಾಡಲಾಗಿತ್ತು. ರೇಡಿಯೋ ಮುಖೇನ ಇದನ್ನೆಲ್ಲಾ ತಿಳಿದ ಚೇ ತನ್ನ ಗೆರಿಲ್ಲಾ ಪಡೆಯ ಕೆಚ್ಚು ಸಾಮರ್ಥ್ಯಗಳನ್ನು ಮೆಚ್ಚಿಕೊಂಡ.

ಅಕ್ಟೋಬರ್ 7, 1967. ಬೊಲಿವಿಯಾದ ದಟ್ಟ ಅರಣ್ಯ ಪ್ರದೇಶದಲ್ಲಿ ಒಂದು ಗೆರಿಲ್ಲಾ ಸೈನ್ಯದ ತುಕಡಿ. ಅದರ ನಾಯಕ ಚೇ ಗೆವಾರ. ಬ್ಯಾರಿಯೆಂಟೋಸ್‌ನ ಸೈನ್ಯ ಈ ತುಕಡಿಯನ್ನು ಅಟ್ಟಿಕೊಂಡೇ ಬಂದಿದೆ ಮತ್ತು ಈಗ ಅದನ್ನು ಸುತ್ತುವರಿದು ನಿಂತಿದೆ. ಗೆರಿಲ್ಲಾಗಳು ಶತ್ರುಸೇನೆಯನ್ನು ಹಿಮ್ಮೆಟ್ಟಿಸುತ್ತಾ ಕೆಲವೊಮ್ಮೆ ಆ ಸೇನೆಯ ಕಣ್ಣುತಪ್ಪಿಸಿ ನಿರ್ಜನ ಪ್ರದೇಶಗಳಲ್ಲಿಯೂ, ಹಳ್ಳಿಗಾಡುಗಳಲ್ಲಿಯೂ ಮುಂದುವರಿಯುತ್ತಾ ಬಂದಿದ್ದಾರೆ. ಮಧ್ಯಾಹ್ನ ಒಂದು ಗಂಟೆ. ಸುತ್ತುವರಿದ ಬ್ಯಾರಿಯೆಂಟೋಸ್‌ನ ಸೈನ್ಯದಿಂದ ಪಾರಾಗಬೇಕಾದರೆ ಕತ್ತಲಾಗುವವರೆಗಾದರೂ ಸೋಲದೆ ಹೋರಾಡಬೇಕು. ಗೆರಿಲ್ಲಾ ಪಡೆ ಹಂಚಿಹೋಗಿ ಸದ್ಯಕ್ಕೆ ಕೆಲವೇ ಮಂದಿ ಚೇ ಜೊತೆಯಲ್ಲಿದ್ದಾರೆ.- ಅವರೆಲ್ಲಾ ಬೇರೆಬೇರೆ ರಾಷ್ಟ್ರಗಳವರು. ಪೆರು, ಕ್ಯೂಬ ಮತ್ತು ಬೊಲಿವಿಯಾದವರೇ ಹೆಚ್ಚು. ಇಂಟಿ ಮತ್ತು ಕೋಕೊ ಪೆರಿಡೋ ಒಂದು ಕಡೆ ದಿಟ್ಟತನದಿಂದ ಶತ್ರುಸೇನೆಯನ್ನು ತಡೆಹಿಡಿದಿದ್ದಾರೆ. ಚೇ ಆಗಲೆ ಗಾಯಗೊಂಡಿದ್ದಾನೆ. ಅವನ ಎಂ-2 ರೈಫಲ್ ನಿಷ್ಪ್ರಯೋಜನವಾಗಿದೆ. ಅವನ ಇನ್ನೊಂದು ಪಿಸ್ತೂಲ್‌ನಲ್ಲಿ ಗುಂಡೇ ಇಲ್ಲ! ಕಾಲಿನ ಗಾಯದಿಂದಾಗಿ ಎಲ್ಲೂ ಓಡಲಾರ. ಹೀಗಾಗಿ ಬ್ಯಾರಿಯೆಂಟೋಸ್‌ನ ಸೈನ್ಯಕ್ಕೆ ಸೆರೆಯಾದ, ಶರಣಾಗಲಿಲ್ಲ. ದಕ್ಷಿಣ ಅಮೇರಿಕಾದಲ್ಲಿ ಯಾವನ ಹೆಸರು ಕಾಡ್ಗಿಚ್ಚಿನಂತೆ ಹರಡಿ ಅಗ್ಗ ಅಮೇರಿಕಾ ಸಂಯುಕ್ತ ಸಂಸ್ಥಾನದ ಶಕ್ತಿ, ಪ್ರಭಾವಗಳಿಂದ ಮೆರೆಯುತ್ತಿದ್ದ ಬ್ಯಾರಿಯೆಂಟೋಸ್‌ನ ಮಿಲಿಟರಿ ಸರಕಾರಕ್ಕೆ ಹೃದ್ರೋಗವನ್ನುಂಟುಮಾಡಿದ್ದಿತೋ, ಆ ವ್ಯಕ್ತಿ ಕಡೆಗೂ ಸೆರೆ ಸಿಕ್ಕಿದನೆಂದು ಸಾಮ್ರಾಜ್ಯಶಾಹಿ ಭಂಟರು ಎಲ್ಲೆಲ್ಲೂ ಸಂತಸಪಟ್ಟರು. ಚೇ ಗೆವಾರಾ ಹಿಗೇರಸ್ ಪಟ್ಟಣಕ್ಕೆ ಸಾಗಿಸಲ್ಪಟ್ಟ. ಸೆರೆಹಿಡಿದವರೊಡನೆ ಸಂಭಾಷಿಸಲು ನಿರಾಕರಿಸಿದ; ಅವನನ್ನು ರೇಗಿಸಹೊರಟವನೊಬ್ಬನ ಮತ್ತು ಮಿಲಿಟರಿ ಅಧಿಕಾರಿಯೊಬ್ಬನ ಮುಖದ ಮೇಲೆ ಮುಷ್ಟಿಯಿಂದ ಬಲವಾಗಿ ಗುದ್ದಿದ.

ಬ್ಯಾರಿಯೆಂಟೋಸ್, ಓವಾಂದೋ, ಮಂತ್ರಿತರ ಉನ್ನತ ಮಿಲಿಟರಿ ಅಧಿಕಾರಿಗಳು ಲಪಾಜ್‌ನಲ್ಲಿ ಸೇರಿದರು. ಚೇನನ್ನು ಕೊಲ್ಲಬೇಕೆಂದು ಅವರ ತೀರ್ಮಾನ. ಹಿಗೇರಸ್‌ನಲ್ಲಿ ಚೇ ಅಂತ್ಯವಾಗಬೇಕು. ಅಮೇರಿಕಾದಲ್ಲಿ ತರಬೇತಿ ಪಡೆದಿದ್ದ ಮೇಜರ್ ಅಯೋರೋ ಮತ್ತು ಕರ್ನಲ್ ಸೆಲ್ನಿಚ್ ಸೇರಿ ಮೇರಿಯೋ ಟೆರಾನ್‌ಗೆ ಈ ಕಾರ್ಯವನ್ನು ನಿರ್ವಹಿಸಿದರು. ಚೇ ಇದ್ದೆಡೆಗೆ ಸೆಲ್ನಿಚ್ ಹೋಗುವ ಮುಂಚೆಯೇ ಇಬ್ಬರು ಗೆರಿಲ್ಲಾಗಳನ್ನು ಗುಂಡಿಟ್ಟು ಕೊಂದಾಗಿತ್ತು. ಆ ಗುಂಡಿನ ಸದ್ದು ಚೇ ಕಿವಿಯನ್ನು ತಾಗಿತ್ತು. ಸಲ್ನಿಚ್ ಸ್ವಲ್ಪ ಹಿಂಜರಿದ: "ಗುಂಡು ಹೊಡೆ, ಹೆದರಬೇಡ" ಎಂದಬ್ಬರಿಸಿದ ಚೇ. ಸಲ್ನಿಚ್ ಚೇನನ್ನು ಕೊಲ್ಲದೆ ಅಲ್ಲಿಂದ ಕಾಲ್ತೆಗೆದ.

ಅರಣ್ಯದಲ್ಲಿ ಯುದ್ಧದ ಮಧ್ಯದಲ್ಲೇ ಚೇ ಸತ್ತಿದ್ದನೆಂದು ಆಗಲೇ ಸರ್ಕಾರ ಹೇಳಿಕೆ ಕೊಟ್ಟಾಗಿತ್ತು. ನೋವಿನಿಂದ ನರಳುತ್ತಿದ್ದ ಚೇ ಯಾವನೋ ಸೈನಿಕನ ಗುಂಡಿಗೆ ಬಲಿಯಾಗಿ ಅಸುವನ್ನು ನೀಗಿದ. ಇದು ಕ್ಯೂಬಾದ ನಾಯಕ ಡಾ॥ ಫಿಡೆಲ್ ಕ್ಯಾಸ್ಟ್ರೋ ಅವರ ವರದಿ. ಆದರೆ ಚೇ ಸತ್ತ ಬಗೆ ಇದೇ ಎಂದು ಹೇಳಲಾಗದಿರುವುದು ಆತನ ವಿರುದ್ಧದ ಹಲವಾರು ಸಂಚುಗಳ ಸ್ವರೂಪವನ್ನು ಬಯಲಿಗೆಳೆಯುತ್ತದೆ. ತನ್ನ ಜೀವನ ಕಾಲದಲ್ಲೇ ಐತಿಹ್ಯಗಳಿಗೆ ವಸ್ತುವಾದ ಚೇ ಗೆವಾರಾ ಸತ್ತ ರೀತಿಯೂ ಒಂದು ಐತಿಹ್ಯವಾಗಿಯೇ ಉಳಿದಿದೆ. ಆದರೆ ಆತನ ಜೀವನ ಮತ್ತು ಹೋರಾಟಗಳು ಮಾತ್ರ ನೈಜವಾಗಿದ್ದು ಐತಿಹಾಸಿಕವಾಗಿ ಚಿರಸ್ಥಾಯಿಯಾಗಿರುವಂತಹವು.

ಅಮೇರಿಕಾದ ಸಾಮ್ರಾಜ್ಯಶಾಹಿ ಕುನೀತಿಯ ವಿರುದ್ಧ ಚೇ ಸಿಡಿದೆದ್ದದ್ದು ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ. ಮಾರ್ಮಿಕ ವಸಾಹತುಶಾಹಿಯಿಂದಾಗಿ ದಕ್ಷಿಣ ಅಮೇರಿಕಾದ ಜನತೆ ಕಷ್ಟಕಾರ್ಪಣ್ಯಗಳಿಗೆ ತುತ್ತಾಗಿ ಹಲವಾರು ಶತಮಾನಗಳ ದಬ್ಬಾಳಿಕೆಯಿಂದ ಹೊರಬರಲು ಪ್ರಯತ್ನ ನಡೆಸುತ್ತಿದ್ದಾಗ ಅಮೇರಿಕಾದ ಜನವಿರೋಧಿ ನೀತಿಯು ಹಲವಾರು ಕ್ರಾಂತಿಗಳನ್ನು ಪ್ರಚೋದಿಸಿತು. ನವ ವಸಾಹತುಶಾಹಿಯ ಶೋಷಣೆಯ ಕ್ರಮವನ್ನು ಯಥಾವತ್ತಾಗಿ ಪ್ರತಿಪಾದಿಸುವುದು ದಕ್ಷಿಣ ಅಮೇರಿಕಾ ರಾಷ್ಟ್ರಗಳ ಪರಿಸ್ಥಿತಿಯನ್ನು ವಿಶ್ಲೇಷಿಸುವುದರಿಂದ ಸಾಧ್ಯವಾಗುತ್ತದೆ. ಅಮೇರಿಕಾಗಳ ಭೂಪಟದತ್ತ ಗಮನ ನೀಡೋಣ. ದಕ್ಷಿಣ ಅಮೇರಿಕೆಯಲ್ಲಿ ತೆಂಗಿನಮರದ ಬುಡಕ್ಕೆ ನೀರೆರೆಯುತ್ತಾನೆ ಒಬ್ಬ ದಕ್ಷಿಣ ಅಮೇರಿಕಾದ ರೈತ. ವೃಕ್ಷ ಬೆಳೆದು ಫಲಬಿಟ್ಟಿದೆ. ಆದರೆ ಮರದ ತುದಿ ಉತ್ತರ ಅಮೇರಿಕಾದವರೆಗೆ ಬೆಳೆದು ನಿಂತಿದೆ. ಇಲ್ಲಿ ಐಸೆನ್ ಹೋವರ್, ಕೆನಡಿ, ಜಾನ್ಸನ್, ನಿಕ್ಸನ್ ಮತ್ತು ಕಾರ್ಟರ್ ಕಾಯಿಗಳನ್ನು ಕಿತ್ತು ತುಂಬಿಕೊಳ್ಳುತ್ತಿದ್ದಾರೆ. ಕ್ಯೂಬಾದ ಸಕ್ಕರೆ, ಮೆಕ್ಸಿಕೋವಿನ ತೈಲ, ಬ್ರೆಜಿಲ್‌ನ ಕಾಫಿ, ಚಿಲಿಯ ತಾಮ್ರ. ಇತ್ಯಾದಿಗಳೆಲ್ಲಾ ಅಮೇರಿಕೆಯ ಕೆಲವು ಬಂಡವಾಳಿಗರ ಸ್ವತ್ತು. ಆ ದೇಶಗಳ ಜನತೆಯನ್ನು ಲೂಟಿ ಮಾಡಲು ಅಮೇರಿಕಾ ಸರ್ಕಾರದ (ಅ)ನೈತಿಕ ಮತ್ತು ಮಿಲಿಟರಿ ಬೆಂಬಲ. ಏಕಸ್ವಾಮ್ಯ ಚಕ್ರಾಧಿಪತ್ಯವು ದಕ್ಷಿಣ ಅಮೇರಿಕಾವನ್ನೆಲ್ಲಾ ಆಕ್ರಮಿಸಿ ಅಲ್ಲಿಹ ಜನತೆಯನ್ನು ಕಂಗಾಲು ಮಾಡಿದೆ. ಅಲ್ಲಿಯ ದುಡಿತ, ಪರಿಶ್ರಮಗಳಿಗೆ ಕ್ರಮವಿಲ್ಲ; ಅಲ್ಲಿಯ ಸಂಪತ್ತಿಗೆ ಬೆಲೆಯಿಲ್ಲ; ಅಲ್ಲಿನ ಜನತೆಗೆ ಗೌರವವಿಲ್ಲ. ಎಷ್ಟು ದಿನ ಹೀಗೇ ನಡೆದೀತು ?

ಈ ಪ್ರಶ್ನೆಗಳು ಚೇ ಗೆವಾರಾನನ್ನು ಬಾಧಿಸಲು ಮೊದಲುಮಾಡಿದ್ದು ಆತ ಒಂದು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ಹಲವು ದಕ್ಷಿಣ ಅಮೇರಿಕಾ ರಾಷ್ಟ್ರಗಳ ಮಂದಿಯನ್ನು ಕಾಲೇಜಿನಲ್ಲಿ ಅವನು ಭೇಟಿಯಾಗಿದ್ದ. ವಿಶ್ವದ ಇತಿಹಾಸವನ್ನು ವಿಶೇಷವಾಗಿ ಅಭ್ಯಾಸ ಮಾಡಲಿಲ್ಲವಾದರೂ ಚೇಗೆ ವಿಶ್ವದ ಬದಲಾವಣೆಗಳು ನಿರಂತರವಾಗಿ ಕಂಡುಬಂದವು. ಸುಮಾರು ನಾಲ್ಕುನೂರು ವರ್ಷಗಳ ಕಾಲ ಸ್ಪೇನ್ ದಕ್ಷಿಣ ಅಮೇರಿಕಾದ ರಾಷ್ಟ್ರಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡಿತ್ತು. ಎರಡನೆಯ ಮಹಾಯುದ್ಧದ ಅನಂತರ ವಸಾಹತುಶಾಹಿ ಪದ್ಧತಿ ನೂತನ ಸ್ವರೂಪವನ್ನು ತಾಳಿತು. ವಿಶ್ವದ ಬೇರೆ ಕೆಲವೆಡೆಗಳಲ್ಲಿ ಆದಂತೆ ದಕ್ಷಿಣ ಅಮೇರಿಕಾದಲ್ಲೂ ತೋರಿಕೆಗೆ ರಾಷ್ಟ್ರಗಳು ಸ್ವತಂತ್ರವಾದುವು. ಆರ್ಥಿಕ ಶೋಷಣೆಯು ಮಾತ್ರ ಇನ್ನೂ ತೀವ್ರವಾಗಿಯೇ ಮುಂದುವರೆಯಿತು. ಇದರ ವಿರುದ್ಧ ಒಂದು ಪ್ರಜ್ಞೆ ಬೆಳೆಯುತ್ತಿದ್ದು ಕ್ಯೂಬಾದ ಹೋರಾಟವು ಒಂದು ಮಾರ್ಗದರ್ಶನವೆಂಬಂತೆ ಮೂಡಿಬಂತು. ದುರ್ದೈವವೆಂದು ನಂಬಲಾಗಿದ್ದ ಅಲ್ಲಿನ ಬಟಿಸ್ಟಾ ಸರ್ಕಾರ ಜನತೆಯ ವಿರುದ್ಧ ಅದೆಷ್ಟು ಪೋಲೀಸ್ ಮಿಲಿಟರಿ ಪಡೆಗಳನ್ನುಪಯೋಗಿಸಿದರೂ ಸಹ ಕಡೆಗೂ ಕುಸಿದುಬಿತ್ತು. ಫಿಡೆಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ- ಡಿಸೆಂಬರ್ 5, 1956ರಂದು "ಗ್ರಾನ್ಮಾ" ಎಂಬ ದೋಣಿಯಲ್ಲಿ ಕ್ಯೂಬಾದ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ತೀವ್ರಗೊಳಿಸಲು ಆ ದೇಶದ ತೀರದಲ್ಲಿ ಕೆಲ ಮಂದಿ ಕ್ರಾಂತಿಕಾರಿಗಳು ಬಂದಿಳಿದರು. ಕ್ಯೂಬಾದವನಲ್ಲದ ಚೇ ಗೆವಾರ ಆ ಗುಂಪಿನಲ್ಲಿದ್ದ. ಇಪ್ಪತ್ತೈದು ತಿಂಗಳ ಅವಿಶ್ರಾಂತ ಹೋರಾಟದಿಂದಾಗಿ ಕ್ಯೂಬಾ ನವೀನವಾದ ರೀತಿಯಲ್ಲಿ ಸ್ವಾತಂತ್ರ್ಯವನ್ನು ದಕ್ಕಿಸಿಕೊಂಡಿತು. ವೈದ್ಯಕೀಯ ತರಬೇತಿಯನ್ನು ಪಡೆದಿದ್ದ ಚೇ ಗೆವಾರ ಆ ಕಾಲದಲ್ಲೆಲ್ಲಾ ವೈದ್ಯನಿಗೂ ಹೆಚ್ಚಾಗಿ ಗೆರಿಲ್ಲಾ ಸೈನಿಕನಾಗಿ ಕಾದಾಡಿದ. ಸ್ವತಂತ್ರ ಕ್ಯೂಬಾದಲ್ಲಿ ಶಿಕ್ಷಣ ಮತ್ತು ತತ್ಸಂಬಂಧಿತ ಖಾತೆಗಳನ್ನು ಚೇ ನಿರ್ವಹಿಸಲನುವಾದ. ಉನ್ನತ ನಾಯಕತ್ವವನ್ನು ನೀಡಿ ಕ್ಯೂಬಾವನ್ನು ಭವ್ಯ ಭವಿಷ್ಯದತ್ತ ಕೊಂಡೊಯ್ಯುವುದರಲ್ಲಿ ಕ್ಯಾಸ್ಟ್ರೋಗೆ ಸಹಭಾಗಿಯಾಗಿ ನಿಂತು ಕ್ಯೂಬಾದವನಲ್ಲದ ಚೇ ಹೆಸರಾಂತ ವ್ಯಕ್ತಿಯಾದ. ಪದವಿಯ ಅಭಿಲಾಷೆಯಿಲ್ಲದ ಚೇ ಕ್ಯೂಬಾಗಾಗಿ ಹೋರಾಟ ನಡೆಸಿದಂತೆ ಬೇರೆ ದಕ್ಷಿಣ ಅಮೇರಿಕಾ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ನಡೆಸಬೇಕಾದುದು ತನ್ನ ಅಂತರರಾಷ್ಟ್ರೀಯ ಸಹಯೋಗದೃಷ್ಟಿಯಿಂದ ನಿರ್ಧರಿಸಲಾದ ಕರ್ತವ್ಯವೆಂದು ಬಗೆದ. ಕ್ಯೂಬಾದ ಭವಿಷ್ಯ ಅಲ್ಲಿಯ ಜನತೆಯ ಕೈಸೇರಿತ್ತು. ಆದರೆ ಬೇರೆ ದಕ್ಷಿಣ ಅಮೇರಿಕಾ ರಾಷ್ಟ್ರಗಳ ವರ್ತಮಾನ ಇನ್ನೂ ಸಾಮ್ರಾಜ್ಯಶಾಹಿಗಳ ಕೈಯಲ್ಲೇ ಇತ್ತು, ಇದನ್ನು ಸಹಿಸದಾದ ಚೇ. ಎಂದೇ ಕ್ಯಾಸ್ಟ್ರೋವಿಗೆ ತನ್ನ ನಿರ್ಧಾರ ವ್ಯಕ್ತಪಡಿಸಿದ. ಪದವಿಯನ್ನು ಬಿಟ್ಟುಕೊಟ್ಟು, ಕ್ಯೂಬಾದಿಂದ ತೆರಳಿ, ಅರ್ಜೆಂಟೈನಾ, ಪೆರು, ಬೊಲಿವಿಯಾ, ಮೆಕ್ಸಿಕೋ ಇನ್ನಿತರ ರಾಷ್ಟ್ರಗಳಿಂದ ಬಂದ ಜನರು ಗೆರಿಲ್ಲಾ ತುಕಡಿಯನ್ನೊಂದು ಕಟ್ಟಿ ಆ ಎಲ್ಲ ದೇಶಗಳಲ್ಲೂ ಸಾಮ್ರಾಜ್ಯಶಾಹಿಯ ವಿರುದ್ಧ ಸೆಣಸಾಡಬೇಕೆಂಬುದೇ ಆ ನಿರ್ಧಾರ. ಆ ರಾಷ್ಟ್ರಗಳನ್ನು ಸಾಮ್ರಾಜ್ಯಶಾಹಿ ಹಿಡಿತದಿಂದ ವಿಮುಕ್ತಿಗೊಳಿಸುವುದೇ ಗುರಿ. ನಿರ್ಧಾರವನ್ನು ಕೈಗೊಂಡ ಮೇಲೆ ಅದನ್ನು ಕಾರ್ಯಗತಗೊಳಿಸುವುದಕ್ಕೆ ಮುನ್ನಡೆಯಲು ಚೇಗೆ ಬಹಳ ಕಾಲ ಹಿಡಿಯಲಿಲ್ಲ. "ಎಲ್ಲ ಕಾಲಗಳಲ್ಲೂ ಎಲ್ಲ ಪರಿಸ್ಥಿತಿಗಳಲ್ಲೂ ಹೋರಾಟ ನಡೆಸದಿರಲು ಸಾಕಷ್ಟು ಕಾರಣಗಳನ್ನು ಹುಡುಕುವುದು ಅಸಾಧ್ಯವೇನಲ್ಲ. ಆದರೆ ವಿಮುಕ್ತಿಯನ್ನು ಪಡೆಯದಿರುವುದಕ್ಕೆ ಅವೇ ಕಾರಣವಾಗುತ್ತವೆ." ಇದನ್ನು ಸಂಪೂರ್ಣವಾಗಿ ಮನಗಂಡಿದ್ದ ಚೇ. "ಯಾವ ತ್ಯಾಗಕ್ಕೂ ಹಿಂಜರಿಯದ ಮತ್ತು ಭಯವೇನೆಂಬುದರ ಸೋಂಕಿಲ್ಲದ ಚೇ ಅಂತರರಾಷ್ಟ್ರೀಯ ಅನ್ಯೋನ್ಯತೆಯ ಪ್ರತೀಕವಾದ. ಆಕ್ಸ್‌ಫರ್ಡ್, ಪ್ಯಾರಿಸ್, ಹಾರ್ವರ್ಡ್ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳ ಒಂದು ಬಣಕ್ಕೆ ಅತ್ಯುನ್ನತ ವ್ಯಕ್ತಿಯಾಗಿ ಕಂಗೊಳಿಸಿದ. ಕೆಲವರಿಗಂತೂ ಆರಾಧ್ಯದೇವತೆಯೇ ಆದನೆಂದರೂ ತಪ್ಪಾಗಲಾರದು. ನಿಷ್ಠೆ ಮತ್ತು ಯುವಕ ಪ್ರಜ್ಞೆಯ ಮೂರ್ತಿಯೆಂದು ಪ್ರಖ್ಯಾತನಾದ ಚೇ".

ಆತನದು ಕೇವಲ ಸಾವಿನೊಡನೆ ಸೆಣಸಾಟವಲ್ಲ; ತನ್ನ ಶೌರ್ಯವನ್ನು ತೋರಿಸಿ ವಿಜೃಂಭಿಸುವುದೇ ಗುರಿಯೂ ಅಲ್ಲ. ದಾಸ್ಯದಲ್ಲಿ ತೊಳಲಿ ಕಂಗಾಲಾಗಿರುವ ಮುಗ್ಧ ಜನತೆಯ ಪ್ರಜ್ಞೆಯನ್ನು ಹೊಡೆದೆಬ್ಬಿಸಿ ಸ್ವಾತಂತ್ರ್ಯದತ್ತ ಆ ಜನತೆಯನ್ನು ಕೊಂಡೊಯ್ಯುವುದೇ ಆತನ ಅಂತಿಮ ಮತ್ತು ಏಕೈಕ ಗುರಿಯಾಗಿತ್ತು. ಅದಕ್ಕಾಗಿ ಆತನು ಅನುಸರಿಸಿದ ಮಾರ್ಗದ ಬಗ್ಗೆ ನಮ್ಮಲ್ಲಿ ಯಾವುದೇ ಅಭಿಪ್ರಾಯವಿದ್ದರೂ ಆತನ ತ್ಯಾಗಮಯೀ ಜೀವನಕ್ಕೆ ನಮ್ಮ ಪ್ರಣಾಮಗಳಿದ್ದೇ ತೀರುತ್ತದೆ.

ಹೋರಾಟ ಮತ್ತು ಮಾನವೀಯತೆಗಳು ಪರಸ್ಪರ ಹೊಂದಿಕೊಂಡೇ ನಡೆಯುತ್ತವೆಂಬುದಕ್ಕೆ ಚೇ ಗೆವಾರಾನ ಜೀವನವೇ ಒಂದು ನಿದರ್ಶನ. ಮಾನವೀಯತೆಯ ಆವಿಷ್ಕಾರವಾಗಲು ಹೋರಾಟವೇ ದಾರಿ ಎಂದು ಆತನ ನಿರ್ಧಾರ. ಹೋರಾಟವಿಲ್ಲದಿದ್ದರೆ ಶೋಷಣೆ, ದಬ್ಬಾಳಿಕೆ ಮತ್ತು ಹಿಂಸೆಗಳು ಮುಂದುವರೆದಾವೆಂದು ಆತನ ಕಾರ್ಯಪ್ರವೃತ್ತಿ. ಎಂದೇ ಚೇ ಗೆವಾರ ಹಲವು ಕ್ರಾಂತಿಕಾರಿಗಳಿಗೆ ಪ್ರೀತಿಯ ನಾಯಕ. ಆತನೊಮ್ಮೆ ನುಡಿದಿದ್ದ : "ನಾವು ಅಂತರರಾಷ್ಟ್ರೀಯ ದುಡಿಯುವ ಜನತೆಯ ನಿಜವಾದ ಐಕ್ಯತೆಯನ್ನು ಸಾಧಿಸೋಣ. ನಾವು ಯಾವ ಪತಾಕೆಯ ಅಡಿಯಲ್ಲಿ ಹೋರಾಡುತ್ತೇವೋ ಅದು ಮಾನವನ ವಿಮುಕ್ತಿಯ ಕೀರ್ತಿಯನ್ನು ಹಾಡುವ ಪತಾಕೆ. ಅಮೇರಿಕಾದವನಾಗಲಿ, ಏಷ್ಯಾದವನಾಗಲೀ, ಆಫ್ರಿಕಾದವನಾಗಲಿ, ಅವನಿಗೆ ವಿಯೆಟ್ನಾಂ, ವೆನಿಜೂಲ, ಗ್ವಾಟೆಮಾಲ, ಲಾವೋಸ್, ಗಿನಿ, ಕೊಲಂಬಿಯಾ, ಬೊಲಿವಿಯಾಗಳಲ್ಲಿ ಎಲ್ಲಿ ಮರಣ ಬಂದರೂ ಶ್ರೇಷ್ಠವೇ. ನಾವು ಹುಟ್ಟಿದ ರಾಷ್ಟ್ರವಲ್ಲದಿರುವೆಡೆಯಲ್ಲಿ ನಾವು ಚೆಲ್ಲುವ ಪ್ರತಿಯೊಂದು ರಕ್ತಬಿಂದುವೂ ಜೀವು

(6ನೇ ಪುಟ ನೋಡಿ)

ಈ ಮಾರಣಹೋಮಕ್ಕೆ ಕೊನೆಯೆಂತು?

ನಮ್ಮ ದೇಶದ ಒಂದಲ್ಲ ಒಂದು ಭಾಗದಲ್ಲಿ ಕೋಮು ಘರ್ಷಣೆಯ ಫಲವಾಗಿ ಪ್ರತಿದಿನ ಸರಾಸರಿ ಒಬ್ಬನಿಗಿಂತ ಹೆಚ್ಚು ಮಂದಿಯಂತೆ ಕೊಲೆಗೀಡಾಗುತ್ತಿದ್ದಾರೆ. ಪ್ರತಿದಿನ ಕನಿಷ್ಟ ಒಂದರಂತೆಯಾದರೂ ಕೋಮು ಗಲಭೆ ನಡೆಯುತ್ತಿವೆ. ಕೋಮು ಘರ್ಷಣೆಗಳಿಂದಾಗಿ ದಿನವೊಂದಕ್ಕೆ ಏಳಕ್ಕಿಂತ ಹೆಚ್ಚು ಮಂದಿ ಗಾಯಗೊಳ್ಳುತ್ತಿದ್ದಾರೆ. ಇದು ಕಳೆದ ವರ್ಷದ ದಾಖಲೆ.

1980ರ 365 ದಿನಗಳಲ್ಲಿ ನಡೆದ 421 ಕೋಮು ಘರ್ಷಣೆಯ ಪ್ರಕರಣಗಳಲ್ಲಿ ಒಟ್ಟು 372 ಜನ ಸತ್ತು, 2691 ಮಂದಿ ಗಾಯಗೊಂಡರು.

ಜೆಮ್‌ಷೆಡ್‌ಪುರ, ಅಲೀಗಡ್, ಮೊರಾದಾಬಾದ್, ಬಿಹಾರ ಷರೀಪ್ ಇಲ್ಲೆಲ್ಲಾ ಒಂದೇ ಕತೆಯ ಪುನರಾವರ್ತನೆ-ಅನೇಕರು ಸತ್ತರು, ನೂರಾರು ಮಂದಿ ಗಾಯಗೊಂಡರು, ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ ನಾಶವಾಯಿತು.

ಬ್ರಿಟಿಷ್ ಆಳ್ವಿಕೆಯಿಂದ ಸ್ವತಂತ್ರಗೊಂಡ ದಿನದಿಂದಲ್ಲೂ ಇಂದಿನವರೆಗೂ ಈ ಮಾನವ ಸಂಘರ್ಷ, ಕೊಲೆ, ರಕ್ತಪಾತಗಳು ಅವಿರತ ನಡೆಯುತ್ತಾ ಬಂದಿವೆ. ಜನತೆಯನ್ನು ಧರ್ಮದ ಆಧಾರದಲ್ಲಿ ಬೆಳೆಯುತ್ತಿರುವ ದ್ವೇಷಾಸೂಯೆಗಳ ಆಳವನ್ನು ವಿವರಿಸಬೇಕಾದರೆ ದೀರ್ಘ ಅಧ್ಯಯನ ನಡೆಸಬೇಕಾಗುತ್ತದೆ. ಕೋಮು ಘರ್ಷಣೆಯ ಎಲ್ಲ ಪ್ರಕರಣಗಳಲ್ಲಿ ಎದ್ದು ಕಾಣುವ ಸತ್ಯವೇನೆಂದರೆ; ಹೆಚ್ಚಿನ ಪ್ರಕರಣಗಳಲ್ಲಿ ಇದ್ದಕ್ಕಿದ್ದಂತೆ ಏನೂ ಗಲಭೆಗಳಾಗಿಲ್ಲ. ಬದಲಾಗಿ ಜನತೆಯ ಐಕ್ಯಶಕ್ತಿಗೆ ಹೆದರುವ ಪಟ್ಟಭದ್ರ ಹಿತಾಸಕ್ತಿಗಳು, ಮತಾಂಧತೆಯ ಪ್ರಚಾರಕರು ಗಲಭೆಗಳನ್ನು ಪ್ರಚೋದಿಸಿ ಯೋಜಿತ ಕಾರ್ಯಾಚರಣೆ ನಡೆಸಿದ್ದು.

ಈ ಕೋಮು ಘರ್ಷಣೆಯ ಚರಿತ್ರೆಯೆಂದರೆ, ಆಳುವವರ್ಗವು ತನ್ನ ಸಾಮಾಜಿಕ-ರಾಜಕೀಯ ಪ್ರಭುತ್ವವನ್ನು ಮುಂದುವರೆಸಿಕೊಂಡು ಹೋಗಲು ಜನತೆಯನ್ನು ವಿಭಜಿಸಿ ಆಳಲು 'ಧರ್ಮ'ವನ್ನು ಉಪಯೋಗಿಸಿಕೊಂಡಿರುವ ಚರಿತ್ರೆಯೇ ಆಗಿದೆ.

ಬ್ರಿಟಿಷರು ಭಾರತೀಯರ ಮೇಲಿನ ತಮ್ಮ ಪ್ರಭುತ್ವವನ್ನು ಮುಂದುವರೆಸಲು ಈ ತಂತ್ರವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದರು. 1905ರಲ್ಲಿ ಬಂಗಾಳದ ವಿಭಜನೆ, 1936ರಲ್ಲಿ ಚುನಾವಣಾ ಕ್ಷೇತ್ರಗಳನ್ನು ಮತ್ತು ಮತದಾರರನ್ನು ಹಿಂದು-ಮುಸ್ಲಿಂ ಆಧಾರದಲ್ಲಿ ವಿಭಜಿಸಲು ಮತ್ತು ಅಂತಿಮವಾಗಿ ನಮ್ಮ ದೇಶವನ್ನು, ಭಾರತ-ಪಾಕೀಸ್ತಾನವೆಂದು ವಿಭಜಿಸಿದ್ದು ಇವುಗಳೆಲ್ಲಾ ಬ್ರಿಟಿಷರು ತಮ್ಮ ಆಡಳಿತೆಯನ್ನು, ಶೋಷಣೆಯನ್ನು ಮುಂದುವರಿಸಲು ಮತೀಯ ಭಾವನೆಗಳನ್ನು ಬಿತ್ತಿ, ಬೆಳೆಸಿ, ಪ್ರಚೋದಿಸಿದ ಉತ್ತಮ ಉದಾಹರಣೆಗಳಾಗಿ ನಿಂತಿವೆ.

ವಿಭಜಿಸಿ ಆಳುವ ತಂತ್ರವು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಜಾಗತಿಕ ತಂತ್ರವಾಗಿತ್ತು. ಐರ್ಲೆಂಡ್‌ನಲ್ಲಾಗಲೀ, ದಕ್ಷಿಣ ಆಫ್ರಿಕಾ ಅಥವಾ ಭಾರತದಲ್ಲಾಗಲೀ ಜನತೆಯನ್ನು ಜಾತಿ-ಮತ-ಧರ್ಮ-ವರ್ಣ ಇತ್ಯಾದಿಗಳ ಆಧಾರದಲ್ಲಿ ವಿಭಜಿಸಿ ತಮ್ಮ ಆಳ್ವಿಕೆಯನ್ನು ಮುಂದುವರೆಸಲು ಆಯಾ ಪ್ರದೇಶದಲ್ಲಿ ಜನತೆಯಲ್ಲಿನ ಗುಪ್ತ ವೈರುಧ್ಯಗಳನ್ನು ಪ್ರಚೋದಿಸಿದರು. ಸಮಗ್ರ ರಾಷ್ಟ್ರೀಯ ಚಳುವಳಿಯ ಅಪಾಯವನ್ನು ಮನಗಂಡ ಬ್ರಿಟಿಷರು ಬೆಳೆಸಿದ ವಿಭಜಿಸಿ ಆಳುವ ತಂತ್ರ ಸ್ಪಷ್ಟ ಮತ್ತು ನಿರ್ದಿಷ್ಟ ಉದ್ದೇಶವನ್ನು ಹೊಂದಿತ್ತು. ಇದರ ಪರಿಣಾಮವಾಗಿ ಸ್ವಾತಂತ್ರ್ಯ ಹೋರಾಟಗಾರರಲ್ಲೇ ಗುಂಪುಗಳಾಗಿ ಅನಿಷ್ಟ ಘಟನೆಗಳು ನಡೆದಿದ್ದವು. ಇವೆಲ್ಲವೂ ತಮ್ಮ ಪ್ರಾಬಲ್ಯ, ಆಳ್ವಿಕೆ ಮತ್ತು ಶೋಷಣೆಯನ್ನು ಮುಂದುವರಿಸಿಕೊಂಡು ಹೋಗುವ ಬ್ರಿಟಿಷರ ಉದ್ದೇಶಕ್ಕೆ ಪೂರಕವಾಯಿತು.

ಆ ಸಂದರ್ಭದಲ್ಲಿ ಉದ್ಭವವಾದ ಕೆಲವು ಪ್ರವೃತ್ತಿಗಳಲ್ಲಿ ಬ್ರಿಟಿಷರು ತಮ್ಮ ಹಿತಾಸಕ್ತಿಯನ್ನು ಕಂಡುಕೊಂಡರು. ರಾಷ್ಟ್ರೀಯ ಹೋರಾಟದೊಂದಿಗೆ ಎರಡು ನಿರ್ದಿಷ್ಟ ಪ್ರವೃತ್ತಿಗಳು ಬೆಳೆದು ಬಂದವು. ಹಿಂದೂಗಳಿಗೆ ಮಾತ್ರ ಭಾರತದಲ್ಲಿ ಜೀವಿಸುವ ಹಕ್ಕು ಇರುವುದು ಮತ್ತು ಈ ದೇಶ ಹಿಂದೂಗಳಿಗೆ ಮಾತ್ರ ಸೇರಿದುದು ಎಂಬ ಆರ್.ಎಸ್.ಎಸ್.ನ ಹಿಂದೂರಾಷ್ಟ್ರವಾದಿ ಸಿದ್ಧಾಂತ ಇವುಗಳಲ್ಲೊಂದು. ಹಿಂದೂಗಳ ವಿರುದ್ಧ ದ್ವೇಷವನ್ನು ಕೆರಳಿಸಿ ಮುಸ್ಲಿಂ ಮತಾಂಧತೆಯನ್ನು ಬೆಳೆಸುವ ಮತ್ತೊಂದು ಪ್ರವೃತ್ತಿಯು ಜಮಾಯತ್-ಎ-ಇಸ್ಲಾಮಿ ಎಂಬ ಸಂಘಟನೆಯಾಗಿ ರೂಪು ತಳೆಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸದಿದ್ದರೂ ಈ ಶಕ್ತಿಗಳು ಜನರಲ್ಲಿ ಮತೀಯ ವಿಷಬೀಜ ಬಿತ್ತುವಲ್ಲಿ ಸಫಲವಾದವು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ನಾಯಕತ್ವವೂ ಈ ಕೋಮುವಾದಿ ಶಕ್ತಿಗಳ ಪ್ರಭಾವದಿಂದ ಹೊರತಾಗಿರಲಿಲ್ಲ. ಹಿಂದೂಮಹಾಸಭಾದ ಅಧ್ಯಕ್ಷರಾಗಿದ್ದ ಮದನ ಮೋಹನ ಮಾಲವೀಯ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮುಂದಾಳುವೂ ಸಹ ಆಗಿದ್ದರು. ದೇಶವಿಭಜನೆಯ ಸಮಯದಲ್ಲಿದೇಶವು ಹಿಂದೆಂದೂ ಕಾಣದ ರೀತಿಯ ಕೋಮು ಘರ್ಷಣೆ, ರಕ್ತಪಾತಕ್ಕೆ ತುತ್ತಾಯಿತು. ಇದೇ ಸಮಯದಲ್ಲಿ ಹಿಂದೂ ಮತಾಂಧರಿಂದ ಗಾಂಧೀಯ ಕೊಲೆಯೂ ಆಯಿತು. ಒಂದೆಡೆ ಮುಸ್ಲಿಂರನ್ನು ಭಾರತದಿಂದ ಓಡಿಸುವಂತೆ ಆರ್. ಎಸ್. ಎಸ್. ಯೋಜಿತ ಪ್ರಯತ್ನ ನಡೆಸಿತು. ಇನ್ನೊಂದೆಡೆ ಪಾಕಿಸ್ತಾನದಲ್ಲಿನ ಮುಸ್ಲಿಂ ಮತಾಂಧರು ಹಿಂದೂಗಳನ್ನು ಅಮಾನುಷವಾಗಿ ಹಿಂಸಿಸಿದರು. ಪರಿಣಾಮವಾಗಿ ಸಾವಿರಾರು ಜನರ ಪ್ರಾಣಹರಣವಾಯಿತು. ಎರಡೂ ಕಡೆಗಳಲ್ಲಿ ಲಕ್ಷಾಂತರ ಜನರು ನಿರಾಶ್ರಿತರಾದರು. ಅದೊಂದು ಎಂದೆಗೂ ಮರೆಯದ ಕರಾಳ ಅಧ್ಯಾಯ.

ಸ್ವಾತಂತ್ರ್ಯಾನಂತರ ದೇಶವನ್ನಾಳುತ್ತಾ ಬಂದಿರುವ ಭಾರತದ ಆಳುವ ವರ್ಗಗಳು ಕೋಮುದ್ವೇಷವನ್ನು ತೊಡೆದುಹಾಕಿ ಹಿಂದೂ-ಮುಸ್ಲಿಂ ಜನಾಂಗಗಳ ನಡುವೆ ಸೌಹಾರ್ದತೆಯ ತಳಹದಿಯನ್ನು ಹಾಕುವಲ್ಲಿ ಹೆಚ್ಚಿನ ಪ್ರಯತ್ನಗಳನ್ನು ಮಾಡಿಲ್ಲ. ಜಾತ್ಯಾತೀತತೆಯ ಮಂತ್ರವನ್ನು ಬಾಯಲ್ಲಿ ಪಠಿಸುತ್ತಾ, ಸರ್ವಧರ್ಮೀಯರಿಗೂ ಸಮಾನ ಅವಕಾಶ ಇತ್ಯಾದಿಗಳನ್ನು ಘೋಷಿಸಿದ್ದರೂ ಜಾತಿ-ಮತ-ಧರ್ಮಗಳ ಪ್ರಯೋಜನಪಡೆದು ತಮ್ಮ ಸ್ವಾರ್ಥ ಹಿತಸಾಧನೆಯನ್ನು ಮಾಡಿಕೊಂಡು ಬರಲಾಗಿದೆ. ತಮ್ಮ ರಾಜಕೀಯ ಲಾಭಕ್ಕಾಗಿ ಜಾತಿ-ಮತಗಳ ಪ್ರಯೋಜನ ಪಡೆಯುತ್ತಿರುವ ಆಳುವ ವರ್ಗವು ಈ ಗುಂಪುಗಳನ್ನು ತಮ್ಮ ಓಟಿನ ಬ್ಯಾಂಕ್‌ಗಳನ್ನಾಗಿ ಮಾಡಿಕೊಂಡಿವೆ.

ಇಡೀ ಜನತೆಯ ಪರವಾದ ನೀತಿಯನ್ನು ಅನುಸರಿಸುವ ಬದಲು ಕೋಮು ಪ್ರವೃತ್ತಿಯಿರುವ ಪ್ರದೇಶಗಳಲ್ಲಿ 'ಕೆಲವೊಂದು ಗುಂಪುಗಳನ್ನು ಮೆಚ್ಚಿಸಲು, ತಮಗೆ ಮತ ನೀಡಿದಲ್ಲಿ ನಿರ್ದಿಷ್ಟ ವಿಭಾಗಕ್ಕೆ ಅನುಕೂಲ ಮಾಡಿಕೊಡುವ ಭರವಸೆ ನೀಡಿ ಮತಗಳಿಸಲು ಪ್ರಯತ್ನಿಸಲಾಗುತ್ತಿದೆ. ಇದರೊಂದಿಗೆ ಸ್ವಾತಂತ್ರ್ಯಾನಂತರ ಅನುಸರಿಸುತ್ತಿರುವ ಆರ್ಥಿಕ ಧೋರಣೆಗಳ ಫಲವಾಗಿ ಬೆಳೆದಿರುವ ಅತೃಪ್ತಿ ಮತ್ತು ಸಮಸ್ಯೆಗಳಿಂದಾಗಿ ವಿವಿಧ ಮತೀಯ ಗುಂಪುಗಳನ್ನು ಪರಸ್ಪರ ಎತ್ತಿಕಟ್ಟುವುದು ಸುಲಭವಾಗಿದೆ. "ಮುಸ್ಲಿಂರನ್ನು ಭಾರತದಿಂದ ಓಡಿಸಿದರೆ ಹಿಂದೂಗಳಿಗೆ ಹೆಚ್ಚು ಉದ್ಯೋಗಾವಕಾಶಗಳು ದೊರೆತು ಸಮೃದ್ಧಿ ಹೊಂದುವರು" ಇತ್ಯಾದಿ ಘೋಷಣೆಗಳು ಹುಟ್ಟಿಕೊಂಡಿವೆ.

ಆರ್. ಎಸ್. ಎಸ್. ನಂತಹ ಮತಾಂಧ ಸಂಘಟನೆಗಳ ಚಟುವಟಿಕೆಗಳಿಗೆ ಪೂರಕವಾಗಿ ಇಂದು ಕೋಮುದ್ವೇಷದ ಪ್ರಚೋದನೆಗೆ ಪೂರಕವಾದ ಪರಿಸ್ಥಿತಿ ನೆಲೆಸಿದೆ. ಆಳುವ ಪ್ರಭುಗಳಿಗೆ ಈ ಪರಿಸ್ಥಿತಿಯಿಂದಾಗಿ ಇನ್ನೂ ಅನುಕೂಲವಾಗಿದೆ. ಸರಕಾರದ ದಿವಾಳಿಖೋರ ನೀತಿಯ ವಿರುದ್ಧ ಹೋರಾಡುವ ಬದಲು ಜನರು ತಮ್ಮತಮ್ಮೊಳಗೆ ಕಾದಾಡಿಕೊಳ್ಳುತ್ತಿದ್ದಾರೆ. ಈ ರೀತಿಯ ಕೋಮುಗಲಭೆಗಳು ಆರ್. ಎಸ್. ಎಸ್.ಗೆ ತನ್ನ ರಾಜಕೀಯ ನೆಲೆಯನ್ನು ವಿಸ್ತರಿಸಿಕೊಳ್ಳಲು ಉತ್ತಮ ಅವಕಾಶ.

ಇತ್ತೀಚಿನ ಮತೀಯ ಗಲಭೆಗಳು ಈ ಪ್ರವೃತ್ತಿಗಳ ಸೂಚಕಗಳಾಗಿವೆ. ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಇತಿಹಾಸದ ಪುಟಗಳಲ್ಲಿ ಅಡಗಿ ಹೋಗಿರುವ ಗತಕಾಲದ ವೈರುಧ್ಯಗಳನ್ನು ಹೊರತೆಗೆದು ಪೊಳ್ಳುಸುದ್ದಿಗಳನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡಲಾಗುತ್ತಿದೆ.ನಂತರ ಮಾಮೂಲಿ ಘಟನೆಗಳು ಜರುಗುತ್ತವೆ. ಸೌಹಾರ್ದತೆಯಿಂದ ಬಾಳುತ್ತಿದ್ದವರನ್ನು ಪರಸ್ಪರ ಎತ್ತಿಕಟ್ಟಲಾಗುತ್ತಿದೆ. ಕೊಲೆ, ಸುಲಿಗೆ, ದರೋಡೆ ನಡೆಯುತ್ತಿವೆ.

ಆಳುವ ಪ್ರಭುಗಳು ಈ ಕುರಿತು ಕಿಂಚಿತ್ತೂ ಚಿಂತಿಸುವುದಿಲ್ಲ. ಬದಲಾಗಿ ಜನತೆಯ ಪ್ರಕೋಪವು ಇವರ ಶೋಷಣೆ ಮತ್ತು ದಿವಾಳಿಖೋರ ಧೋರಣೆಗಳಿಂದ ವಿಮುಖಗೊಂಡಿರುವುದಕ್ಕಾಗಿ ಸಂತೋಷಗೊಂಡಿದ್ದಾರೆ.

ಕೋಮು ಘರ್ಷಣೆಗಳು

ವರ್ಷ	ಘಟನೆಗಳ ಸಂಖ್ಯೆಗಳು	ಗಾಯಗೊಂಡವರ ಸಂಖ್ಯೆ	ಸತ್ತವರಸಂಖ್ಯೆ ಹಿಂದೂ	ಮುಸ್ಲಿಂ	ಒಟ್ಟು
1950-63	341	—	—	—	389
1966	—	—	—	—	45
1967	—	—	—	—	251
1968	346	1549	24	99	133
1969	519	2977	66	558	674
1970	521	1723	68	176	298
1971	321	1330	38	65	103
1972	240	1207	21	45	70
1973	242	1550	26	45	72
1974	248	1266	26	61	87
1975	205	962	11	22	33
1976	169	794	20	19	39
1977	188	1122	12	24	36
1978	219	1801	51	56	108
1979	304	—	—	—	260
1980	421	2691	—	—	372

—"ಸ್ಟೂಡೆಂಟ್ಸ್ ಸ್ಟ್ರಗಲ್"ದಿಂದ

ಅತಿವೃಷ್ಟಿಯಿಂದ ಅನಾಹುತ

ಇತ್ತೀಚೆಗೆ ಕೋಲಾರ ಜಿಲ್ಲೆಯ ಬಂಗಾರುಪೇಟೆ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದಾಗಿ ತುಂಬಾ ಅನಾಹುತಗಳಾಗಿವೆ. ಬಂಗಾರುಪೇಟೆಯ ಸಮೀಪದ ರೈಲು ನಿಲ್ದಾಣ ಹಾನಿಗೊಳಗಾಗಿದೆ. ರೈಲು ಸೇತುವೆಗಳು, ಕೆರೆಗಳು ಕೊಚ್ಚಿಕೊಂಡು ಹೋಗಿವೆ. ಸಂಬಂಧಪಟ್ಟ ಇಲಾಖೆಯವರು ಈ ಕುರಿತು ಗಂಭೀರವಾಗಿ ಯೋಚಿಸುತ್ತಿಲ್ಲ ಕೂಡ. ಹಾನಿಗೊಳಗಾದ ಸೇತುವೆ, ರಸ್ತೆ ಮತ್ತು ಕೆರೆಗಳನ್ನು ಕೂಡಲೇ ದುರಸ್ತಿಮಾಡಬೇಕಾಗಿದೆ.

ಮುಖ್ಯಮಂತ್ರಿ ಮತ್ತು ರಾಜ್ಯ ಸರಕಾರ ಪ್ರಚಾರ ಸಾಧನಗಳು ನೊಂದ ಜನತೆಗೋಸ್ಕರ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಪ್ರವಾಹದಲ್ಲಿ ತಮ್ಮ ಗುಡಿಸಲು, ಮನೆ-ಮಾರು ಕಳೆದುಕೊಂಡ ಬಡ ಜನತೆಗೆ ಯಾವುದೇ ರೀತಿಯ ಪರಿಹಾರ ಲಭ್ಯವಾಗಿಲ್ಲ. ಬಂಗಾರುಪೇಟೆ ಕೆರೆ ಇನ್ನೂ ದುರಸ್ತಿಯಾಗಿಲ್ಲ. ಅಕ್ಕಪಕ್ಕದಲ್ಲಿ ಜಮೀನುಳ್ಳ ಚಿಕ್ಕ ರೈತರು ನೀರಿಗೋಸ್ಕರ ಈ ಕೆರೆಯನ್ನೇ ನೆಚ್ಚಿಕೊಂಡಿದ್ದು ಅವರೂ ಕಂಗಾಲಾಗಿದ್ದಾರೆ.

ತಮ್ಮ ಪರಿಹಾರ ಕಾರ್ಯಕ್ರಮಕ್ಕೋಸ್ಕರ ಯಾವುದೇ ಫಂಡು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಬಂಗಾರುಪೇಟೆಯ ಬಸ್‌ಸ್ಟ್ಯಾಂಡ್ ಬಳಿಯ ಸೇತುವೆ ನೀರಿನ ಹಾವಳಿಯಿಂದ ಕುಸಿದು ಬಿದ್ದಿದ್ದು ಇನ್ನೂ ರಿಪೇರಿ ಕಂಡಿಲ್ಲ. ಕೋಲಾರ ಜಿಲ್ಲೆಯ ಮಂತ್ರಿಗಳೂ, ಶಾಸಕರೂ ಕೇವಲ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದಾರೆ. ಸರಕಾರದ ಯಂತ್ರಗಳು ಚುರುಕಾಗಿದ್ದರೆ ಪೋಲಾದ ನೀರಿನಲ್ಲಿ ಅರ್ಧದಷ್ಟನ್ನು ಸಂಗ್ರಹಮಾಡಿಟ್ಟುಕೊಳ್ಳಲು ಸಾಧ್ಯವಿತ್ತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಕೋಲಾರ ಜಿಲ್ಲಾಸಮಿತಿಯ ಪರವಾಗಿ ಹೇಳಿಕೆ ಹೊರಡಿಸಿರುವ ಕಾಂ. ಸವರಿದಾಸ್‌ರು ಸರಕಾರದ ನಿಧಾನ ನೀತಿಯನ್ನು ಉಗ್ರವಾಗಿ ಖಂಡಿಸಿ ಕೂಡಲೇ ದುರಸ್ತಿ ಕಾರ್ಯಗಳನ್ನೂ, ನೊಂದವರಿಗೆ ಶೀಘ್ರ ಪರಿಹಾರ ಹಣವನ್ನು ಕೊಡಬೇಕಾಗಿ ಒತ್ತಾಯಿಸಿದ್ದಾರೆ.

ಗುಲ್ವಾಡಿಯಲ್ಲಿ ದೋಣಿ ಮಗುಚಿ ಒಂಭತ್ತು ಸಾವು!

ಮೃತರ ನೊಂದ ಕುಟುಂಬಕ್ಕೆ ಪರಿಹಾರಕ್ಕೆ ಒತ್ತಾಯ

ದ. ಕ. ಜಿಲ್ಲೆಯ ಕುಂದಾಪುರದಿಂದ ಆರು ಮೈಲು ದೂರದಲ್ಲಿ ಗುಲ್ವಾಡಿ ಗ್ರಾಮವಿದೆ. ಇಲ್ಲಿ 3 ಹೆಂಚಿನ ಕಾರ್ಖಾನೆಗಳಿದ್ದು, ಒಟ್ಟು 450 ಕಾರ್ಮಿಕರು ಕೆಲಸಮಾಡುತ್ತಿದ್ದಾರೆ. ಗುಲ್ವಾಡಿ ಮತ್ತು ಬಸರೂರಿನ ಮಧ್ಯ ವಾರಾಹಿ ಹೊಳೆ ಹರಿಯುತ್ತಾ ಇದೆ. ತಾ. 26-9-1981 ರಂದು ಮಧ್ಯಾಹ್ನ 2 ಘಂಟೆಯ ಸಮಯ ಈ ಆಳವಾದ ಹೊಳೆಯಲ್ಲಿ ಬಸರೂರಿನಿಂದ ಗುಲ್ವಾಡಿಗೆ ಪ್ರಯಾಣಿಕರನ್ನು ದಾಟಿಸುತ್ತಿದ್ದ ದೋಣಿಯು ಆಕಸ್ಮಾತಾಗಿ ಗಾಳಿಯಿಂದ ತೂಫಾನು ಉಂಟಾದ ಪರಿಣಾಮವಾಗಿ ಮಗುಚಿ ಒಟ್ಟು ಒಂಭತ್ತು ಮಂದಿ ನೀರು ಪಾಲಾದರು. ಇಬ್ಬರು ಹಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರು; ಇಬ್ಬರು ಶಾಲಾ ಬಾಲಕಿಯರು ಮತ್ತು ಐದು ಮಂದಿ ಹೆಂಗಸರು-ಇವರೆಲ್ಲರೂ ಕೃಷಿಕೂಲಿಗಾರರಾಗಿದ್ದಾರೆ. 19 ಮಂದಿಯ ಪೈಕಿ 10 ಮಂದಿಯನ್ನು ರಕ್ಷಿಸಲಾಗಿದೆ. ಮೃತರಲ್ಲಿ ಹೆಚ್ಚಿನವರು ಹೆಂಚಿನ ಕಾರ್ಖಾನೆಯ ಕಾರ್ಮಿಕರ ಹತ್ತಿರದ ಬಂಧುಗಳೇ ಆಗಿರುತ್ತಾರೆ.

ಹೆಸರು ಕ್ರಮವಾಗಿ ಈ ರೀತಿ ಇವೆ:-ಸುಮಾರು 15 ವರ್ಷ ಪ್ರಾಯದ ವಿಜಯಲಕ್ಷ್ಮಿ ಮತ್ತು ವನಜ-ಇವರು ಶಾಲಾ ಬಾಲಕಿಯರು ಆಗಿದ್ದು, ಶಾಲೆಯಿಂದ ಮನೆಗೆ ಮರಳುತ್ತಿದ್ದರು.

ನೀರುಪಾಲಾದವರ ಪತ್ತೆಗೆ ತಾ॥ 26ರಂದು ಸತತವಾಗಿ ಹೆಂಚಿನ ಕಾರ್ಮಿಕರು ಮತ್ತು ಊರಿನ ಇತರ ವಿಭಾಗದವರು ಹೆಚ್ಚಿನವರು ಹೊಳೆಯಲ್ಲಿ ಮುಳುಗಿ ಜಾಲಾಡಿದರೂ ಫಲವಾಗದೇ, ಮತ್ತೆ ಮರುದಿನ ಶೋಧ ಮುಂದುವರಿಸಿದ ಪರಿಣಾಮವಾಗಿ ತಾರೀಕು 27ರಂದು ಸಂಜೆ 8 ಶವಗಳ ಪತ್ತೆಯಾದವು. ಅನಂತರ ತಾರೀಕು 28ರಂದು ಬೆಳಿಗ್ಗೆ ಒಂದು ಶವದ ಪತ್ತೆಯಾಯಿತು. ಒಂದೇ ಸ್ಥಳದಲ್ಲಿ ತಾರೀಕು 28ರಂದು ದಹಿಸಲಾಯಿತು.

ಸಂತಾಪ ಸೂಚಕ ಸಭೆ

ತಾರೀಕು 28ರಂದು ಗುಲ್ವಾಡಿ ಪ್ರದೇಶದ ಮೂರು ಹೆಂಚಿನ ಕಾರ್ಖಾನೆಯ ಕೆಲಸಗಾರರು ಕೆಲಸಕ್ಕೆ ಹೋಗದೇ, ಸಂತಾಪ ವ್ಯಕ್ತಪಡಿಸುವ ಅಂಗವಾಗಿ ಬೆಳಿಗ್ಗೆ ಸುಮಾರು 9 ಘಂಟೆಗೆ ಎಲ್ಲರೂ ಒಂದು ಕಡೆ ಸೇರಿ 2 ನಿಮಿಷ ಮೌನ ಆಚರಿಸುವುದರೊಂದಿಗೆ ಸಂತಾಪ ವ್ಯಕ್ತಪಡಿಸಿದರು. ಮುಖ್ಯಕಾರ್ಯಕರ್ತರಾದ ಕಾಂ. ಜಿ. ಬಚ್ಚ, ಜಿ. ಮಂಜಪ್ಪ ಮತ್ತು ಕೆ. ರಾಮ ಇವರು ಬಸವಶೆಟ್ಟಿ, ಜೋಸೆಫ್ ಮತ್ತು ಇತರರೆ ಕುರಿತು ಮಾತನಾಡಿ, ಮೃತರ ಕುಟುಂಬದವರಿಗೆ ದುಃಖವನ್ನು ತಡೆಯುವಂತಾಗಲಿ ಎಂದು ಹಾರೈಸಿದರು.

ತಾರೀಕು 28ರಂದು ಗುಲ್ವಾಡಿ ಮತ್ತು ಬಸರೂರಿನಲ್ಲಿ ಅಂಗಡಿ ಮತ್ತು ಹೋಟೆಲ್‌ಗಳು ಮುಚ್ಚಲಾಗಿದ್ದು ಊರಿನ ಇತರ ವಿಭಾಗದ ಜನರು ಕೂಡಾ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

ದ.ಕ. ಜಿಲ್ಲಾ ರೈತಸಂಘದ ಪರವಾಗಿ ಸಂಘದ ಅಧ್ಯಕ್ಷರಾದ ಕಾಂ. ಅಬ್ರಹಾಂ ಕರ್ಕಡರವರು, ಸಿ.ಐ.ಟಿ.ಯು.ವಿನ ಪರವಾಗಿ ಕಾಂ. ಕೆ.ಶಂಕರ್‌ರವರು ಮತ್ತು ಟ್ಯೈಲ್ ವರ್ಕರ್ಸ್ ಯೂನಿಯನ್ನಿನ ಪರವಾಗಿ ಕಾಂ. ಸಿ. ನಾರಾಯಣರವರು ಸಂತಾಪ ವ್ಯಕ್ತಪಡಿಸಿರುತ್ತಾರೆ; ಹಾಗೂ ಮೃತರ ನೊಂದ ಕುಟುಂಬಕ್ಕೆ ಯೋಗ್ಯ ಪರಿಹಾರ ಕೊಡಬೇಕೆಂದು ಸರಕಾರವನ್ನು ಒತ್ತಾಯಪಡಿಸಿರುತ್ತಾರೆ.

●

ಅದಮ್ಯ ಚೇ ಗೆವಾರ

(4ನೇ ಪುಟದಿಂದ)

ತವಾಗಿರುವ ಜನಕ್ಕೆ ನಾವು ನೀಡಬಹುದಾದ ಅನುಭವ. ಆ ಬಿಂದುವಿಗೆ ತಮ್ಮ ರಕ್ತವನ್ನೂ ಸೇರಿಸಿದರೆ ಆ ಜನದ ವಿಮೋಚನೆಯ ಹೋರಾಟ ಸಫಲಹಾಗುತ್ತದೆ. ವಿಮೋಚನೆಯನ್ನು ಪಡೆಯುವ ಪ್ರತಿಯೊಂದು ರಾಷ್ಟ್ರವೂ ಬೇರೆ ರಾಷ್ಟ್ರಗಳ ವಿಮೋಚನೆಗೆ ದಾರಿ ಮಾಡಿ ಕೊಡುತ್ತದೆ". ಹೀಗೆ ಫಲಪ್ರದವಾಗುವವರೆಗೂ ಕ್ರಾಂತಿ ಮತ್ತು ಹೋರಾಟಗಳಿಗಾಗಿ ಕರೆ ನೀಡಿದವನು ಚೇ ಗೆವಾರ.

ಒಟ್ಟು ಜನತೆಯ ವಿಮುಕ್ತಿಯು ಜನತಾ ಸಮುದಾಯದ ಪ್ರಜ್ಞಾಪೂರ್ವಕ ಹೋರಾಟದಿಂದ ಮಾತ್ರವೇ ಸಾಧ್ಯ. ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯಿಂದಲ್ಲದೆ ವೈಯಕ್ತಿಕ ಧೀರತನದಿಂದ ಸಮಾಜವನ್ನು ಬದಲಾಯಿಸುವುದು ಅಸಾಧ್ಯ. ಚೇ ಗೆವಾರ ಅವರ ಸಾಮರ್ಥ್ಯವು ಕೆಲವೊಮ್ಮೆ ನಿಷ್ಫಲವಾಗಲು ಇದು ಕಾರಣ. ಬೊಲ್ಲಿವಿಯಾದ ಜನತೆಯನ್ನು ವಿಮುಕ್ತಿಗೊಳಿಸಲು ಹೊರಟ ಚೇ ಮತ್ತಿತರ ಗೆರಿಲ್ಲಾಗಳು ಆ ದೇಶದ ಜನತೆಯ ಸಾಮ್ರಾಜ್ಯಶಾಹೀ ವಿರುದ್ಧದ ಪ್ರಜ್ಞೆಯ ಬೆಳವಣಿಗೆಗಾಗಿ ಯಾವ ಪ್ರಯತ್ನವನ್ನೂ ಮಾಡಲಾಗಲಿಲ್ಲ. ಬದಲಾಗಿ ಅಲ್ಲಿಯ ಜನತೆಯು ಈ ಗೆರಿಲ್ಲಾ ಪಡೆಗಳನ್ನು ಕಂಡು ಭೀತರಾಗುವಂತೆ ಮಾಡುವುದರಲ್ಲಿ ಸಾಮ್ರಾಜ್ಯಶಾಹಿ ಯಶಸ್ವಿಯಾಯಿತು. ಜನತೆಯನ್ನು ಸಂಘಟಿಸಿ ಹೋರಾಟ ನಡೆಸಲು ನಾಯಕತ್ವವನ್ನು ನೀಡಲು ಸಾಧ್ಯವಾಗಿದ್ದಿದ್ದರೆ ಬೊಲಿವಿಯಾದ ಮಿಲಿಟರಿ ಸರಕಾರದ ಗತಿ ಬೇರೆಯೇ ಆಗಿರುತ್ತಿತ್ತು! ಗಾಂಧೀಜಿ, ಲೆನಿನ್, ಹೋಚಿಮಿನ್, ಇತ್ಯಾದಿಗಳ ಪರಂಪರೆಗೆ ಸೇರುವ ಚೇ ಗೆವಾರ ಹಲವು ವಿಷಯಗಳಲ್ಲಿ ಅವರಿಗಿಂತ ತೀರಾ ಭಿನ್ನನಾದವನು. ಕೆಲವೊಮ್ಮೆ ವೈಯಕ್ತಿಕ ಕಾದಾಟದಲ್ಲಿ ಭರವಸೆ ಇಟ್ಟುಕೊಂಡಿದ್ದವನು ಈತ. ಆದರೆ ಜನತೆಯ ಪರವಾಗಿ ಕೆಲವು ನಾಯಕರು ಮಾತ್ರ ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗದು. ಆ ನಿರ್ಧಾರಗಳನ್ನು ಕಾರ್ಯಗತಗೊಳಿಸುವುದು ಕೇವಲ ನಾಯಕರಲ್ಲ; ಆದ್ದರಿಂದ ಆ ನಿರ್ಧಾರಗಳು ಜನತೆಯ ನಿರ್ಧಾರವಾಗಿರಬೇಕು. ಈ ನಿರ್ಧಾರಗಳನ್ನು ರೂಪಿಸುವಲ್ಲಿ ಜನತೆಯ ಇಚ್ಛೆ ಮತ್ತು ಪ್ರಜ್ಞೆಯನ್ನು ಸರಿಯಾಗಿ ಪ್ರತಿಫಲಿಸುವವನೇ ಉತ್ತಮ ನಾಯಕನಾಗಬಲ್ಲ. ಕ್ರಿಯಾವಂತ ಕ್ರಾಂತಿಕಾರಿಯಾಗಬಲ್ಲ. ಚೇ ಗೆವಾರಾಗಿದ್ದ ಆಸ್ಥೆ, ಧೈರ್ಯ, ಸಾವು ಕ್ರಾಗಳೆಲ್ಲಾ ಸ್ವಲ್ಪಮಟ್ಟಿಗೆ ವ್ಯರ್ಥವಾದದ್ದು ಈ ಚಾರಿತ್ರಿಕ ತತ್ವದೃಷ್ಟಿ ಇಲ್ಲದ್ದರಿಂದ ಎಂದು ಭಾವಿಸಿದರೆ ತಪ್ಪಾಗಲಾರದು.

ಚೇ ತನ್ನದೇ ಆದ ಮಾರ್ಗವನ್ನು ಹಿಡಿದು ಮುಂದುವರಿದ. ನಿಸ್ವಾರ್ಥತೆ, ಶೋಷಣೆಯ ವಿರುದ್ಧ ಕಳಕಳಿ, ಮಾನವನ ಸುಖಿ ಮತ್ತು ಭವಿಷ್ಯದ ಬಗ್ಗೆ ಅಪಾರವಾದ ಪ್ರೇಮ ಮತ್ತು ತಡೆಯಲಾಗದ ಹುಮ್ಮಸ್ಸು, ಇತ್ಯಾದಿಗಳೆಲ್ಲಾ ಚೇ ಗೆವಾರಾನ ಗುಣಗಳಲ್ಲಿ ಎದ್ದು ಕಾಣುತ್ತವೆ. ವಿಶ್ವದ ಯುವಜನಾಂಗದ ಅದಮ್ಯ ಶಕ್ತಿ ಮತ್ತು ಭಾವನೆಗಳ ಪ್ರತೀಕ ಚೇ ಗೆವಾರ. ಎಂದೇ ಆತನನ್ನು "ಅದಮ್ಯ ಚೇ" ಎಂದು ಕರೆಯುವುದು.

●

ಕಾರವಾರದಲ್ಲಿ ಜನತಾ ಆಯೋಗ

ಇತ್ತೀಚೆಗೆ ದಾಂಡೇಲಿಯಲ್ಲಿ ಪ್ಲೈವುಡ್ ಕಾರ್ಮಿಕರ ಮೇಲೆ ನಡೆದ ಪೋಲೀಸ್ ದೌರ್ಜನ್ಯ, ಹಲ್ಲೆ, ದಾಂಡೇಲಿ ನಗರದಲ್ಲಿ ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಯನ್ನು ಪ್ರತಿಭಟಿಸಿ 29-9-81ರಂದು ಕಾರವಾರದ ಜಿಲ್ಲಾಧಿಕಾರಿ ಮತ್ತು ಎಸ್. ಪಿ. ಆಫೀಸಿನೆದುರು ಬಿಣಗಾ ಕಾಸ್ಟಿಕ್ ಸೋಡಾ ಕಂಪನಿಯ ಸಾವಿರಾರು ಕಾರ್ಮಿಕರು ಮತ್ತು ನಾಗರಿಕರು ಬೃಹತ್ ಮತಪ್ರದರ್ಶನ ನಡೆಸಿದರು.

ದಾಂಡೇಲಿಯ ಪ್ಲೈವುಡ್ ಕಾರ್ಮಿಕರನ್ನು ಥಳಿಸಿ, ಬಂಧಿಸಿ ಅವರ ಮೇಲೆ ಪೋಲೀಸ್ ಅಧಿಕಾರಿಗಳು ಸುಳ್ಳು ಮೊಕದ್ದಮೆ ಹೂಡಿದ್ದಾರೆ. ಇನ್ನೂ ಕೆಲವರನ್ನು ಪೋಲೀಸರು ಹೊಡೆದು ತೀವ್ರವಾಗಿ ಗಾಯಗೊಳಿಸಿದ್ದಾರೆ. ಈ ರೀತಿ ಹೊಡೆತಕ್ಕೊಳಗಾದ ಶ್ರೀ ಪೀಟರ್ ಎಂಬ ಕಾರ್ಮಿಕ ದಾಂಡೇಲಿ ಸರಕಾರಿ ಆಸ್ಪತ್ರೆಯಲ್ಲಿ ಮರಣಾಂತಿಕ ಪರಿಸ್ಥಿತಿಯಲ್ಲಿದ್ದು, ಮೂರು ತಿಂಗಳ ಗರ್ಭಿಣಿಯಾದ ಅವನ ಹೆಂಡತಿಯು ಪೋಲೀಸರ ಹೊಡೆತದಿಂದ ಗರ್ಭಪಾತ ಹೊಂದಿ ಆಸ್ಪತ್ರೆ ಸೇರಿದ್ದಾಳೆ. ಇಂಥ ಘೋರ ದಬ್ಬಾಳಿಕೆಯ ವಿರುದ್ಧ ದಾಂಡೇಲಿಯ ಜನತೆ ಯಾವುದೇ ಪ್ರತಿಭಟನೆ ಮಾಡದಂತೆ 144 ನೇಯ ಕಲಮು ಜಾರಿಗೊಳಿಸಿ ನೆರೆಯ ಜಿಲ್ಲೆಯಾದ ಧಾರವಾಡದಿಂದ ಸಶಸ್ತ್ರ ಪೋಲೀಸ ಪಡೆಯನ್ನು ತರಿಸಲಾಗಿದೆ. ತತ್ಪರಿಣಾಮವಾಗಿ ದಾಂಡೇಲಿಯ ಜನತೆಯಲ್ಲಿ ಸರಕಾರದ ವಿರುದ್ಧ ತೀವ್ರ ಕ್ಷೋಭೆ ಮತ್ತು ಹತಾಶ ಭಾವನೆ ಮೂಡಿದೆ.

ಈ ರೀತಿಯ ದಬ್ಬಾಳಿಕೆಯ ಕೊನೆಯಲ್ಲಿ ಹಿಂಸಾಚಾರಕ್ಕೆ ಎಡೆಮಾಡಿ ಕೊಡುವ ಭೀತಿ ಹೆಚ್ಚುತ್ತಿದ್ದು ಹೀಗೆ ಆದಲ್ಲಿ ಶಾಂತಿಯನ್ನು ಕದಡಿಸಿದ ಹೊಣೆ ಪೋಲೀಸ ಅಧಿಕಾರಿಗಳದ್ದೇ ಆಗಿದೆ.

ಕಾರವಾರ ಜಿಲ್ಲೆಯ ಜನತೆಯು ಅಧಿಕಾರದ ವರ್ಗದ ಸರ್ವಾಧಿಕಾರದ ವಿರುದ್ಧ ಬಹಿರಂಗ ವಿಚಾರಣೆ ನಡೆಸಲು ಕಾಂ. ಎಂ. ಎಸ್. ಧಾರೇಶ್ವರ (Advocate) ಇವರ ಅಧ್ಯಕ್ಷತೆಯಲ್ಲಿ ಜನತಾ ಆಯೋಗ ರಚಿಸಲಾಗಿದೆ. ಈ ಜನತಾ ಆಯೋಗ ಕಾರವಾರದ ಡಿ. ಸಿ.—ಎಸ್. ಪಿ. ಕಚೇರಿಗಳ ಎದುರು ಸಾಕ್ಷಾಧಾರ ಸಂಗ್ರಹಿಸಲಿದೆ.

ಮತಪ್ರದರ್ಶನ ನಡೆದ (29-9-81) ದಿನ ಕಾರವಾರ ಡಿ. ಸಿ. ಆಫೀಸಿನೆದುರು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯನ್ನು ಉದ್ದೇಶಿಸಿ ಕಾಂ. ಧಾರೇಶ್ವರ, ಆರ್. ಜಿ. ಸ್ಥಳೇಕರ್ ಮತ್ತು ಕಾಂ. ಮನೋಹರ, ಜನ್ನು ಮೊದಲಾದವರು ಮಾತನಾಡಿ ಪೋಲೀಸ್ ದಬ್ಬಾಳಿಕೆಯನ್ನು ಉಗ್ರವಾಗಿ ಖಂಡಿಸಿದರು. ○

●

ಅಸ್ಪೃಶ್ಯತೆ ಪ್ರತಿಭಟಿಸಿ ಮೆರವಣಿಗೆ

27-9-81ರಂದು, ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ ಇತ್ತೀಚೆಗೆ ಪ್ರಾರಂಭವಾಗಿರುವ ದ. ಸಂ. ಸ. ಘಟಕವು ಅಸ್ಪೃಶ್ಯತೆಯನ್ನು ಪ್ರತಿಭಟಿಸಿ ಮೌನ ಮೆರವಣಿಗೆಯನ್ನು ಹೊರಡಿಸಿ ಸರ್ಕಲ್ ಇನ್ಸ್‌ಪೆಕ್ಟರಿಗೆ ಮನವಿ ಅರ್ಪಿಸಿತು.

ಊರಿನ 18-20 ಹೋಟೆಲ್‌ಗಳಲ್ಲಿ ದಲಿತರಿಗೆ ಬೇರೆ ಕಪ್ಪು ಪಾತ್ರೆಗಳನ್ನಿಟ್ಟು ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದ ದರಿದ್ರ ಪದ್ಧತಿಗೆ ರೋಸಿ ಹೋಗಿದ್ದ ನೂರಾರು ದಲಿತರು ಈ ಮೆರವಣಿಗೆ ಹೊರಡಿಸಿದ್ದರು.

ಮೂವರು ದಲಿತ ಯುವಕರು ಸ್ಥಳೀಯ ಚೆನ್ನಪ್ಪನ ಹೋಟೆಲ್‌ನಲ್ಲಿ ಚಹ ಕುಡಿಯಲು ಹೋದಾಗ, ಅವರನ್ನು ಪರಂಪರೆಯಿಂದ ಬಂದ ಪದ್ಧತಿಯಂತೆ ಕುಳಿತುಕೊಳ್ಳಲು, ಹೊರಗಿಟ್ಟ ಕಪ್ಪುಗಳಲ್ಲಿ ಚಹ ಕುಡಿಯಲು ಕೊಟ್ಟಾಗ ಆ ಯುವಕರು ಪ್ರತಿಭಟಿಸಿದರು. ಈ ಘಟನೆಯೇ ದಲಿತ ಯುವಕರ ಪ್ರತಿಭಟನೆಗೆ ನಾಂದಿಯಾಯಿತು.

ಈಗ ಪೋಲೀಸರು ಊರಿನ ಎಲ್ಲ ಹೋಟೆಲ್‌ಗಳಲ್ಲಿ ಈ ಹೊಲಸು ಪದ್ಧತಿಯನ್ನು ನಿಲ್ಲಿಸಿದ್ದಾರೆ.

ದ. ಸಂ. ಸ. ಘಟಕದ ಸಂಚಾಲಕ ಸಂಗಪ್ಪ, ಉಪಸಂಚಾಲಕ ಗನಿ, ಖಜಾಂಚಿ ಹಾಲಪ್ಪ ಇವರು ನಂತರ ನಡೆದ ಸಭೆಯಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಡಲು ಕರೆ ನೀಡಿದರು.

ವರದಿ—ಎಸ್. ಎಸ್. ಹಿರೇಮಠ

ಸಂತಾಪ

ದ. ಕ. ಜಿಲ್ಲೆಯ ಜಪ್ಪಿನಮೊಗ್ರು ಗ್ರಾಮದ ಗಾಣದಹಿತ್ಲು ಎಂಬಲ್ಲಿಯ ಅಣ್ಣಪ್ಪ ಸಫಲ್ಯರು 12-9-81ರಂದು ನಿಧನರಾಗಿದ್ದಾರೆ. ಶ್ರೀಯುತರಿಗೆ 75 ವರ್ಷವಯಸ್ಸಾಗಿತ್ತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಿಷ್ಠಾವಂತ ಹಿತೈಷಿಯಾಗಿದ್ದರು. ಜಪ್ಪಿನಮೊಗ್ರು ಗ್ರಾಮದ ಪಕ್ಷದ ಶಾಖೆ ಅಣ್ಣಪ್ಪ ಸಫಲ್ಯರ ನಿಧನಕ್ಕೆ ತನ್ನ ಸಂತಾಪ ವ್ಯಕ್ತಪಡಿಸಿದೆ.

* * *

ಮಂಗಳೂರಿನ ಕೆನರಾ ವರ್ಕ್‌ಶಾಪಿನಲ್ಲಿ ದುಡಿಯುತ್ತಿದ್ದ ಶ್ರೀ ಮಧುಕರ ಎಂಬವರು ದಿನಾಂಕ 22-9-81 ರಂದು ಫ್ಯಾಕ್ಟರಿಯೊಳಗೇ ಆಕಸ್ಮಿಕ ಅಪಘಾತಕ್ಕೆ ಈಡಾಗಿ ನಿಧನರಾಗಿದ್ದಾರೆ.

23-9-81ರಂದು ಸಂಸ್ಥೆಯ ಎಲ್ಲ ನೌಕರರೂ, ಅಧಿಕಾರಿಗಳೂ ಸಭೆ ಜರುಗಿಸಿ ಮಧುಕರರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

●

ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಸಮ್ಮೇಳನ

ದಿನಾಂಕ 2-10-81ರಂದು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು.ನ 2ನೇ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಸುಮಾರು 300 ಪ್ರತಿನಿಧಿಗಳು ಆಗಮಿಸಿದ್ದರು. ಸಮ್ಮೇಳನ ಉದ್ಘಾಟನೆ ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಘಟಕದ ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಇವರಿಂದ ನಡೆಯಿತು.

ಅಧ್ಯಕ್ಷ ಮಂಡಳಿಯಲ್ಲಿ ಕಾಂ. ಟಿ. ಎಸ್. ಅನಂತರಾಂ, ಕಾಂ. ಆರ್. ಶ್ರೀನಿವಾಸ್, ಕಾಂ. ಎನ್. ಎಲ್. ಉಪಾಧ್ಯಾಯ ಮತ್ತು ಕಾಂ. ಪಿ.ಕೆ. ಸುಬ್ರಮಣಿ ಇದ್ದರು. ಸಮ್ಮೇಳನದಲ್ಲಿ ಪ್ರಧಾನಕಾರ್ಯದರ್ಶಿ ಟಿ. ಎಸ್. ಅನಂತರಾಂ ವರದಿಯನ್ನು ಮಂಡಿಸಿದರು. ಸುಮಾರು 20ಕ್ಕೂ ಹೆಚ್ಚು ಮಂದಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಿ.ಐ.ಟಿ.ಯು. ಮುಖಂಡರಾದ ಕಾಂ. ಎ. ಜೆ. ಕೆ. ನಾಯರ್, ಕಾಂ. ಮುಹಮದ್ ದಸ್ತಗೀರ್, ಕಾಂ. ಸೂರ್ಯನಾರಾಯಣರಾವ್ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು. ರೈತಸಂಘದ ಕಾಂ. ಪಿ. ಜಗನ್ನಾಥ್, ಯುವಜನತೆ ಮುಖಂಡ ಕಾಂ. ಶ್ರೀರಾಮರೆಡ್ಡಿ, ವಿದ್ಯಾರ್ಥಿ ನಾಯಕ ಕಾಂ. ಎಸ್. ಆರ್. ಆರಾಧ್ಯ, ಕಾಂ. ವಿಜಯಲಕ್ಷ್ಮಿ (ಮಹಿಳಾ ಸಂಘ) ಇವರುಗಳು ಸಮ್ಮೇಳನಕ್ಕೆ ಶುಭ ಕೋರಿದರು.

ನಿರ್ಣಯಗಳು

ಈ ಕೆಳಕಂಡ ಮುಖ್ಯ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

೧. ಬೆಂಗಳೂರಿನ ಜನತೆಗೆ ಪಡಿತರ ಮೂಲಕ ರೇಷನ್ ವಿತರಣೆಯ ಅಸ್ತವ್ಯಸ್ತೆ ಬಗ್ಗೆ

ಇತ್ತೀಚೆಗೆ ಬೆಂಗಳೂರಿನಲ್ಲಿ ಸಾರ್ವಜನಿಕರಿಗೆ ರೇಷನ್ ವಿತರಣೆಯ ವ್ಯವಸ್ಥೆ ಬಹಳ ಹದಗೆಟ್ಟಿದೆ. ಸರ್ಕಾರದಿಂದ ಒದಗಿಸುವ ಆಹಾರ ಪದಾರ್ಥಗಳ ವಿತರಣೆ ಜನತೆಗೆ ಸರಿಯಾಗಿ ಆಗುತ್ತಿಲ್ಲ. ಇದಕ್ಕೆ ಸರಿಯಾದ ಕ್ರಮವನ್ನು ಸರ್ಕಾರ ವಹಿಸುತ್ತಿಲ್ಲ. ಒಂದೊಂದು ಸೊಸೈಟಿಗೂ ರೇಷನ್ ಕಾರ್ಡ್‌ಗಳ ಸಂಖ್ಯೆ ಹೆಚ್ಚಾಗಿರುವ ಕಾರಣ ಬಂದ ಆಹಾರ ಪದಾರ್ಥಗಳನ್ನು ಪಡೆಯಲು ಮನೆಮಂದಿಯೆಲ್ಲಾ ದಿನಗಟ್ಟಲೆ 'ಕ್ಯೂ'ನಲ್ಲಿ ನಿಂತು ಕಾಯುವುದು ಸರ್ಕಾರದ ವ್ಯವಸ್ಥೆಗೆ ನಾಚಿಗೇಡು ತರಿಸುವಂತಹದು. ಅನೇಕ ಬಡಜನರಿಗೆ ಮತ್ತು ಮಧ್ಯಮವರ್ಗದ ಜನತೆಗೆ ಇದರಿಂದಾಗಿ ಆಹಾರ ಪದಾರ್ಥ ಪಡೆಯುವುದು ತೀರ ಕಷ್ಟವಾಗಿದೆ. ಆದ್ದರಿಂದ ಸರ್ಕಾರ ಈ ಕೂಡಲೇ ಜನತೆಗೆ ರೇಷನ್ ಒದಗಿಸುವ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡದಿದ್ದ ಪಕ್ಷದಲ್ಲಿ ಬೆಂಗಳೂರಿನ ಜನತೆಯನ್ನು ಸಿ. ಐ. ಟಿ.ಯು. ಉಗ್ರ ಹೋರಾಟಕ್ಕೆ ಇಳಿಸಬೇಕಾಗುವುದೆಂದು ಈ ಮೂಲಕ ಎಚ್ಚರಿಕೆ ನೀಡುತ್ತದೆ.

೨. ಬೆಲೆಏರಿಕೆ

ನಮ್ಮ ರಾಜ್ಯದ ಗುಂಡೂರಾವ್ ಸರ್ಕಾರ ಅವಶ್ಯಕ ಸಾಮಗ್ರಿಗಳ ಬೆಲೆಯನ್ನು ಹತೋಟಿಗೆ ತರುವ ಬದಲು ದಿನೇದಿನೇ ಇವುಗಳ ಬೆಲೆಯನ್ನು ಏರಿಸಿ ಜನಸಾಮಾನ್ಯರ ಕೊಳ್ಳುವಿಕೆಗೆ ಧಕ್ಕೆ ತರುತ್ತಿದೆ. ಇದಕ್ಕೆಲ್ಲಾ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ (ಐ) ಸರ್ಕಾರದ ಆರ್ಥಿಕ ನೀತಿಯೇ ಕಾರಣ. ಕಳ್ಳಸಾಗಾಣಿಕೆದಾರರೂ, ಕಳ್ಳಸಂತೆ ವ್ಯಾಪಾರಿಗಳೂ, ಅಕ್ರಮ ದಾಸ್ತಾನುಗಾರರು ಇವರುಗಳನ್ನು ಬಲಿ ಹಾಕುವುದಾಗಿ ಕೇಂದ್ರ ಮತ್ತು ನಮ್ಮ ರಾಜ್ಯಸರ್ಕಾರಗಳು ಕೂಗು ಹಾಕುತ್ತಿವೆಯೇ ಹೊರತು, ನಿಜವಾಗಿ ಇವರುಗಳು ದಿನೇದಿನೇ ತಮ್ಮ ಬಂಡವಾಳವನ್ನು ಹೆಚ್ಚಿಸಿಕೊಂಡು ಸಾಮಾನ್ಯ ಜನತೆಯನ್ನು ಹೆಚ್ಚುಹೆಚ್ಚು ಶೋಷಣೆ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರ ಇವರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬೆನ್ನೆಲುಬಾಗಿ ನಿಂತಿರುವ ನೀತಿಯನ್ನು ಸಿ. ಐ. ಟಿ. ಯು. ಉಗ್ರವಾಗಿ ಖಂಡಿಸುತ್ತದೆ. ಜನತೆ ಇದರ ವಿರುದ್ಧ ಸಿಡಿದೇಳಬೇಕೆಂದು ಕರೆ ಕೊಡುತ್ತದೆ.

೩. ಅಂಜನಪ್ಪನವರ-ಮೇಲೆ ಹಲ್ಲೆ

ವಿದ್ಯಾರ್ಥಿ ನಾಯಕ ಶ್ರೀ ಅಂಜನಪ್ಪನವರ ಮೇಲೆ ಇತ್ತೀಚೆಗೆ ಕಾಂಗ್ರೆಸ್ (ಐ) ಗೂಂಡಾಗಳ ಹೆಸರಿನಲ್ಲಿ ಎನ್. ಎಸ್. ಯು. ಐ. ನಾಯಕರುಗಳು ನಡೆಸಿದ ಹಲ್ಲೆಯನ್ನು ಸಮ್ಮೇಳನ ಉಗ್ರವಾಗಿ ಖಂಡಿಸುತ್ತದೆ.

೪. ಜಿ. ಆರ್. ಇಂಡಸ್ಟ್ರೀಸ್ ಕಾರ್ಮಿಕರ ಹೋರಾಟ

ಬೆಂಗಳೂರಿನ ವೈಟ್‌ಫೀಲ್ಡ್ ರಸ್ತೆಯಲ್ಲಿರುವ ಜಿ. ಆರ್. ಇಂಡಸ್ಟ್ರೀಸ್ ಕಾರ್ಮಿಕರು ಸುಮಾರು 70 ದಿನಗಳಿಂದ ಅಕ್ರಮವಾಗಿ ವಜಾಮಾಡಲ್ಪಟ್ಟಿರುವ 12 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಮುಷ್ಕರ ನಡೆಸುತ್ತಿದ್ದಾರೆ. ಆದರೆ ಗುಂಡೂರಾಯರ ಸರ್ಕಾರ ಮಾಲೀಕರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಕಣ್ಮುಚ್ಚಿ ಕುಳಿತುಕೊಂಡಿದೆ. ಈ ವಿಧದ ಕಾರ್ಮಿಕ ವಿರೋಧಿ ನೀತಿಯನ್ನು ಹಾಗೂ ಗೂಂಡಾಗಿರಿಯನ್ನು ಈ ಸಮ್ಮೇಳನ ಖಂಡಿಸುತ್ತದೆ.

ಕೂಡಲೇ ಜಿ. ಆರ್. ಇಂಡಸ್ಟ್ರೀಸ್ ಕಾರ್ಮಿಕರ ಬೇಡಿಕೆಯನ್ನು ಮಾಲೀಕರು ಮತ್ತು ಸರ್ಕಾರ ಬಗೆಹರಿಸದಿದ್ದ, ಪಕ್ಷದಲ್ಲಿ ಬೆಂಗಳೂರಿನಲ್ಲಿ ಕಾರ್ಮಿಕರು ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ಆಚರಿಸಬೇಕಾದೀತೆಂದು ಸಮ್ಮೇಳನ ಎಚ್ಚರಿಕೆ ನೀಡುತ್ತದೆ.

೫. ಬಿನ್ನಿಮಿಲ್

ಬಿನ್ನಿಮಿಲ್ ಅನ್ನು ಮುಚ್ಚುವುದಾಗಿ ಮಾಲೀಕರು ಹೆದರಿಸುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮವಹಿಸಿ ಇಂತಹ ಕಾರ್ಮಿಕ ವಿರೋಧಿ ನಿಯಮಗಳಿಗೆ ಅವಕಾಶ ಮಾಡಿಕೊಟ್ಟರೆ ಕಾರ್ಮಿಕರು ಉಗ್ರ ಚಳುವಳಿ ನಡೆಸಬೇಕಾದೀತು ಎಂದು ಸಮ್ಮೇಳನ ಎಚ್ಚರಿಸುತ್ತದೆ.

೬. ಅಗತ್ಯಸೇವಾ ಮಸೂದೆ

ಕೇಂದ್ರಸರ್ಕಾರ ಜಾರಿಯಲ್ಲಿ ತಂದಿರುವ ಅಗತ್ಯಸೇವಾ ಮಸೂದೆಯ ವಿರುದ್ಧ ಸತತ ಕಾರ್ಮಿಕರ ಹೋರಾಟ ಮುಂದುವರಿಸಲೇಬೇಕೆಂದು ಸಮ್ಮೇಳನ ತೀರ್ಮಾನ ತೆಗೆದುಕೊಂಡಿತು.

೭. ಕನಿಷ್ಟ ಕೂಲಿ

ಕನಿಷ್ಟ ಕೂಲಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಮಿಕರಿಗೂ 15ನೇ, ಇಂಡಿಯನ್ ಲೇಬರ್ ಕಾನ್‌ಫರೆನ್ಸ್‌ನಲ್ಲಿ ತೀರ್ಮಾನವಾಗಿರುವಂತೆ ಇಂತಹ ಎಲ್ಲಾ ಕಾರ್ಮಿಕರಿಗೂ ಕನಿಷ್ಟ ಪಕ್ಷ 500ರೂ. ವೇತನ ಮತ್ತು ಬೆಲೆ ಸೂಚ್ಯಂಕಕ್ಕೆ ತಕ್ಕಂತೆ ತುಟ್ಟಿಭತ್ಯವನ್ನು ಕೊಡಬೇಕೆಂದು ಸಮ್ಮೇಳನ ಒತ್ತಾಯಿಸುತ್ತದೆ.

ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಪದಾಧಿಕಾರಿಗಳಾಗಿ ಈ ಕೆಳಕಂಡವರು ಚುನಾಯಿತರಾಗಿದ್ದಾರೆ.

ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ಉಪಾಧ್ಯಕ್ಷರು ಆರ್. ಶ್ರೀನಿವಾಸ್ ಮತ್ತು ಬಾನು, ಪ್ರಧಾನ ಕಾರ್ಯದರ್ಶಿ ಟಿ.ಎಸ್. ಅನಂತರಾಂ, ಕಾರ್ಯದರ್ಶಿಗಳು ಎನ್. ಕೆ. ಎನ್. ನಾಯರ್, ಕೆ. ಎಸ್. ಸುಬ್ರಮಣ್ಯಂ, ಎ. ಜಾನ್ ವಿನ್ಸೆಂಟ್, ಎಂ.ಎಸ್.ಸಿ. ರಾವ್, ಖಜಾಂಚಿ ಪಿ. ಕೆ. ಸುಬ್ರಮಣಿ

ಇದಲ್ಲದೆ 35 ಮಂದಿ ಸದಸ್ಯರಿರುವ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

೦

ಎ.ಕೆ.ಜಿ. ಆತ್ಮಚರಿತ್ರೆ

"ಎಲ್ಲರೂ ಕೊಂಡುಕೊಂಡು ಓದಲೇಬೇಕಾದ ಪುಸ್ತಕ"

ದಿವಂಗತ ಕಾಮ್ರೇಡ್ ಎ. ಕೆ. ಗೋಪಾಲನ್ ಅವರ ಆತ್ಮಚರಿತ್ರೆಯು 1981 ಡಿಸೆಂಬರ್ ಕೊನೆಯಲ್ಲಿ ಕನ್ನಡದಲ್ಲಿ ಪ್ರಕಟಗೊಳ್ಳಲಿದೆ. ಮೈಸೂರಿನ ಭಾರತೀ ಪ್ರಕಾಶನವು ಪ್ರಕಟಿಸುವ ಈ ಪುಸ್ತಕವು 400 ಪುಟ (ಡೆಮಿ)ಗಳಷ್ಟಿದ್ದು ಪ್ರಕಟಣೆಯಾದ ಮೇಲಿನ ಬೆಲೆ ರೂಪಾಯಿ 25/-. ಆದರೆ ಅಕ್ಟೋಬರ್ 15ರೊಳಗೆ ಪ್ರಕಟಣಾಪೂರ್ವವಾಗಿ ಹಣತೆತ್ತು ಪ್ರತಿಗಳನ್ನು ಕಾದಿರಿಸಿಕೊಳ್ಳಬಯಸುವವರು ಪ್ರತಿ ಒಂದಕ್ಕೆ ರೂಪಾಯಿ 15/- ಮಾತ್ರ ಕೊಟ್ಟರೆ ಸಾಕು. ಪ್ರಕಟಣಾಪೂರ್ವವಾಗಿ ಕೊಂಡುಕೊಳ್ಳಲಿಚ್ಛಿಸುವವರು ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ, ಜಿಲ್ಲಾ ಸಮಿತಿ ಕಾರ್ಯದರ್ಶಿಗಳು ಅಥವಾ ನೇರವಾಗಿ ಭಾರತಿ ಪ್ರಕಾಶನಕ್ಕೆ ಬರೆದು ವ್ಯವಸ್ಥೆ ಮಾಡಿಕೊಳ್ಳಬಹುದು.

(ಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು-570 009)

ಎಂ. ಕೆ. ಭಟ್
ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ

ಇದು ಭಾರತ

ಉದ್ಯೋಗ ವಿನಿಮಯ ಕೇಂದ್ರ (Employment Exchange)ಗಳಲ್ಲಿ ಜನವರಿ 1980ರಲ್ಲಿ ಹೆಸರನ್ನು ನೋಂದಾಯಿಸಿದವರ ಸಂಖ್ಯೆ 1.43 ಕೋಟಿ. ಜೂನ್ 1981ರಲ್ಲಿ ಈ ಸಂಖ್ಯೆ 1.63 ಕೋಟಿಗೆ ಏರಿತು.

ಅಂದಾಜಿನಂತೆ ಒಟ್ಟು ನಿರುದ್ಯೋಗಿಗಳ ಸಂಖ್ಯೆ ಸುಮಾರು 23 ಮಿಲಿಯನ್ (1971ರಲ್ಲಿ)ದಿಂದ ಇಲ್ಲಿಯವರೆಗೆ 30 ರಿಂದ 35 ಮಿಲಿಯನ್‌ವರೆಗೆ ಏರಿದೆ. ನಿರುದ್ಯೋಗಿಗಳಲ್ಲಿ 22,500 ಇಂಜಿನೀಯರುಗಳು, 14,800 ಡಾಕ್ಟರುಗಳು, 11,400 ಕೃಷಿ ಪದವೀಧರರು ಮತ್ತು 4,800 ಕಾನೂನು ಪದವೀಧರರೂ ಇದ್ದಾರೆ.

* * * * *

ಹೊಸ ದಿಲ್ಲಿಯ ಕಬೀರ ಬಸ್ತಿ ಎಂಬಲ್ಲಿ ಪಪ್ಪು ಎಂಬ 19 ವರ್ಷದ ಯುವಕ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮರಣಾಸನ್ನ ಹೇಳಿಕೆಯಲ್ಲಿ ಪಪ್ಪು ದೀರ್ಘಕಾಲದ ನಿರುದ್ಯೋಗದಿಂದಾಗಿ ತಾನು ನಿರಾಶೆನಾಗಿದ್ದೆ ಎಂದು ಹೇಳಿಕೆ ಕೊಟ್ಟಿದ್ದಾನೆ.

ಯುದ್ಧದಲ್ಲಿ ಪ್ರಾಣಹಾನಿಗಳಾಗುವದು ಸಹಜವೇ. ಆದರೆ ನನ್ನ ಹೃದಯವು ಒಪ್ಪಲು ನಿರಾಕರಿಸಿತು ಮತ್ತು ನನಗೆ ಅತ್ಯಂತ ದುಃಖವಾಯಿತು. ನಾನು ವಿಧವೆಯರಿಗೆ ಕಾಗದಗಳನ್ನು ಬರೆಯುತ್ತಿದೆ. ನನ್ನ ಸಂಗಾತಿಗಳ ಸಮಾಧಿಗಳಲ್ಲಿ ನನ್ನ ಹಿಡಿಮರಳೂ ಇದೆ. ಮೃತರ ಸಲುವಾಗಿ ಗೌರವ ಸೂಚನೆಗಾಗಿ ಹಾರಿಸಲಾದ ಅನೇಕ ಗುಂಡುಗಳಲ್ಲಿ ನನ್ನ ಸಬ್-ಮೆಷಿನ್‌ಗನ್ನೂ ಇದ್ದಿತು. ಅವರು ಪಾರ್ಟಿಯ ಕರ್ತವ್ಯನಿಷ್ಠ ಪುತ್ರರಾಗಿದ್ದರು. ಪಾರ್ಟಿಯ ಹೆಸರಿನಲ್ಲಿ ಅವರು ಸೈನಿಕರಿಗೆ ಮಾರಕ ಸಂಘರ್ಷದಲ್ಲಿ ಮಾರ್ಗದರ್ಶಕರಾಗಿ ಮುನ್ನಡೆದಿದ್ದರು ಮತ್ತು ಕೊನೆಯುಸಿರು ಇರುವವರೆಗೂ ತಮ್ಮ ನಾಡಿನ ಸಲುವಾಗಿ ಹೋರಾಡುತ್ತಿರಬೇಕೆಂದು ಅವರಿಗೆ ಕರೆ ಕೊಟ್ಟರು. ಯುದ್ಧದಲ್ಲಿ ಇತರರಿಂದ ತಾವು ನಿರೀಕ್ಷಿಸುತ್ತಿದ್ದುದನ್ನು ತಾವೇ ಸ್ವತಃ ಮಾಡಲು ಅವರು ಮೊದಲಿಗರಾಗಿ ಇರುತ್ತಿದ್ದರು ಮತ್ತು ಸೈನಿಕರನ್ನು ಕಡುಗಲಿತನಕ್ಕೆ ಹುರಿದುಂಬಿಸುತ್ತಿದ್ದರು. ಅವರು ಲೆನಿನ್‌ರ ಆಣತಿಗಳನ್ನು ಕಡೆತನಕ ನೆರವೇರಿಸುತ್ತಿದ್ದರು. ಕಮ್ಯುನಿಸ್ಟರು ಗೌರವಯುತರಾಗಿ ಬಾಳಬಲ್ಲರೆಂಬುದು ಮಾತ್ರವಷ್ಟೇ ಅಲ್ಲದೆ, ಗೌರವಯುತರಾಗಿ ಮಡಿಯಲೂ ಬಲ್ಲರೆಂಬುದನ್ನು ಅವರು ತಮ್ಮ ಸ್ವಂತ ಉದಾಹರಣೆಯಿಂದ ತೋರಿಸಿಕೊಟ್ಟಿದ್ದರು.

[ಈ ಮೇಲಿನ ಪ್ಯಾರಾವನ್ನು ಲಿಯೋನಿದ್ ಬ್ರೆಝ್ನೇವ್‌ರು ಬರೆದ "ಸಣ್ಣ ಭೂಮಿ" ಎಂಬ ಯುದ್ಧ ಕಥನದಿಂದ ಆಯ್ದುಕೊಂಡಿದೆ. ಬ್ರೆಝ್ನೇವ್‌ರು ಫ್ಯಾಸಿಸಂನ ವಿರುದ್ಧ ನಡೆದ ಮಹಾನ್ ಸಮರದಲ್ಲಿ ಪ್ರತ್ಯಕ್ಷ ಭಾಗಿಯಾಗಿದ್ದರು. ಯುದ್ಧದಲ್ಲಿ ಸ್ಫೋಟಕ ಅಲೆಯೊಂದರಿಂದ ತಮ್ಮ ಸಂಗಾತಿ ಲೂಕಿನ್‌ರು ಮೃತರಾದ ಸಂದರ್ಭ ಕುರಿತು ಬರೆದದ್ದು]

ರಾಯಚೂರು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯಿಂದ ವಿಚಾರಗೋಷ್ಠಿ

ದಿನಾಂಕ 29-9-81ರಂದು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು ಎಲ್ಲ ಮಹಿಳೆಯರಿಗೆ ತಮ್ಮ ಸಂಘಟನೆಯ ಗೊತ್ತುಗುರಿಗಳನ್ನು ತಿಳಿಸಿ ಅವರಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸುವ ಉದ್ದೇಶದಿಂದ ಸಂಘಟನೆಯ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿಯಾದ ಶ್ರೀಮತಿ ಎನ್. ಗಾಯಿತ್ರಿದೇವಿ ಇವರ ಅಧ್ಯಕ್ಷತೆಯಲ್ಲಿ "ಶಿಕ್ಷಣ ಮತ್ತು ಮಹಿಳೆ" ಹಾಗೂ "ಆರ್ಥಿಕ ಸ್ವಾತಂತ್ರ್ಯ ಮತ್ತು ಮಹಿಳೆ" ಎಂಬ ವಿಷಯಗಳ ಮೇಲೆ ಅಂತರ ಕಾಲೇಜ ಮತ್ತು ಹೈಸ್ಕೂಲ್ ವಿದ್ಯಾರ್ಥಿನಿಯರ ಭಾಷಣ ಸ್ಪರ್ಧೆ ಹಾಗೂ "ಸಾಮಾಜಿಕ ಬಂಧನ"ಗಳಲ್ಲಿ ಮಹಿಳೆ ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆರಂಭದಲ್ಲಿ ಸಂಘಟನೆಯ ಕಾರ್ಯಕರ್ತೆಯಾದ ಶ್ರೀಮತಿ ಎಂ. ದೀಕ್ಷಾದೇವಿ ಮತ್ತು ಸಂಗಡಿಗರಿಂದ ಕ್ರಾಂತಿಗೀತೆಗಳ ಕಾರ್ಯಕ್ರಮ ನಡೆಯಿತು. ಭಾಷಣ ಸ್ಪರ್ಧೆಯಲ್ಲಿ ನಗರದ ಎಲ್ಲಾ ಪ್ರೌಢಶಾಲೆ ಮತ್ತು ಕಾಲೇಜುಗಳಿಂದ ಸುಮಾರು 22 ವಿದ್ಯಾರ್ಥಿನಿಯರು ವಿಚಾರ ಪೂರಿತವಾದ ಭಾಷಣಗಳನ್ನು ಮಂಡಿಸಿದರು. ಈ ಕೆಳಕಂಡ ವಿದ್ಯಾರ್ಥಿನಿಯರು ಕ್ರಮವಾಗಿ ಹಿಂದಿ, ಕನ್ನಡ, ಮತ್ತು ಇಂಗ್ಲೀಷ್‌ನಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ.

ವೀಣಾಮಾಡಿಗಿರಿ, ವಿಜಯಲಕ್ಷ್ಮಿ, ಪದ್ಮಾಜ, ಮೃದುಲಾ, ಸುವರ್ಣಲತಾ, ಶಿವಲೀಲಾ, ನಸೀಮಾಬಾನು, ಅಮೀನ, ರೇಣುಕಾ, ಜಿ. ಎನ್. ವಿಜಯಲಕ್ಷ್ಮಿ, ಜಾಹ್ನವಿ, ಮೀನಾಕ್ಷಿ, ವಿಜಯಲಕ್ಷ್ಮಿ, ಚಿತ್ರರೇಖಾ ಭಾಷಣ ಸ್ಪರ್ಧೆಯ ಕಾರ್ಯಕ್ರಮ ನಿರ್ವಹಣೆಯನ್ನು ಶ್ರೀಮತಿ ಎಂ. ದೀಕ್ಷಾದೇವಿ ಮಾಡಿದರು. ನಂತರ ವಿಚಾರ ಸಂಕಿರಣದ ಆರಂಭದಲ್ಲಿ ಸಂಘಟನೆಯ ಕಾರ್ಯದರ್ಶಿ ಶ್ರೀಮತಿ ಶಾಮಲ ಇವರು ಸಂಘಟನೆಯ ಉದ್ದೇಶ ಹಾಗೂ ಗೊತ್ತುಗುರಿಗಳನ್ನು ತಿಳಿಸಿ ಉಪನ್ಯಾಸಕರು ಮತ್ತು ಅಧ್ಯಕ್ಷರ ಪರಿಚಯಿಸುತ್ತಾ ಸ್ವಾಗತ ಭಾಷಣ ಮಾಡಿದರು. ನಂತರ ಉಪನ್ಯಾಸಕರಾಗಿ ಮಾತನಾಡಿದ ಶ್ರೀಮತಿ ಅಲಕಾ, ವಿಜಯಲಕ್ಷ್ಮಿ ಮತ್ತು ಲಲಿತಾನಾಯ್ಕ ಇವರುಗಳು ಮಹಿಳೆಯರ ಎಲ್ಲಾ ರೀತಿಯ ಸಾಮಾಜಿಕ ಬಂಧನಗಳಿಗೆ ಮೂಲಭೂತ ಕಾರಣ ಆರ್ಥಿಕ ಅವಲಂಬನೆ ಕಾರಣ ದುಡಿಮೆ ಪ್ರತಿಯೊಬ್ಬ ಮಹಿಳೆಯ ಮೂಲಭೂತ ಹಕ್ಕಾಗಬೇಕು ಎಂದು ಹೇಳಿ ಗಂಡಿಗಿಂತ ಹೆಣ್ಣು ಕೀಳು ಎಂಬ ಭಾವನೆ ಹುಟ್ಟಿಸುವಂತಹ ಯಾವುದೇ ಕಾರ್ಯವನ್ನು ಮಾಡದೆ ಇಬ್ಬರು ಸರಿಸಮವಾಗಿ ಪ್ರಜ್ಞಾವಂತರಾಗಿ ಬಾಳುವಂತಹ ಸಾಮಾಜಿಕ ಶಿಕ್ಷಣ ಒದಗಿಸಬೇಕೆಂದು ಹೇಳಿದರು. ನಾಲ್ಕು ಗೋಡೆಗಳಲ್ಲಿ ಬಂಧಿತರಾದ ಮಹಿಳೆಯರು ಎಲ್ಲಾ ರೀತಿಯ ಸಾಮಾಜಿಕ ಬಂಧನಗಳಿಗೆ ತಮ್ಮನ್ನು ತಾವೇ ಮೌನವಾಗಿ ಅರ್ಪಿಸಿಕೊಳ್ಳದೆ ಸ್ವತಂತ್ರ ವಿಚಾರ, ಎಲ್ಲಾ ಕ್ಷೇತ್ರಗಳ ಬಗ್ಗೆ ವೈಚಾರಿಕ ಪ್ರಜ್ಞೆ ಬೆಳೆಸಿಕೊಂಡು ಇಂತಹ ಸಂಘಟನೆಗಳನ್ನು ಕಟ್ಟಿಕೊಂಡು ಅವರ ಎಲ್ಲಾ ರೀತಿಯ ಕ್ರೂರ ಬಂಧನಗಳಿಗೆ ಹಾಗೂ ತಮ್ಮ ದುರಾವಸ್ಥೆಗೆ ಮೂಲ ಕಾರಣವನ್ನು ಹುಡುಕಿ ಪರಿಹಾರವನ್ನು ಕಂಡುಹಿಡಿಯುವಲ್ಲಿ ಸಂಘಟಿತವಾಗಿ ಪ್ರಯತ್ನಿಸಬೇಕೆಂದು ಕರೆ ನೀಡಿದರು. ನಂತರ ಮಾತನಾಡಿದ ಶ್ರೀಮತಿ ಪರವಿನ್ ಫಾರಕಿ ಇವರು ಕ್ರೂರ ವ್ಯವಸ್ಥೆ ಅಡಿಯಲ್ಲಿ ಒದ್ದಾಡುತ್ತಿರುವ ಮಹಿಳೆಯರ ವಿಮೋಚನೆಗೆ ಇಂತಹ ಸಂಘಟನೆಗಳು ಅತಿ ಅವಶ್ಯ. ಎಲ್ಲಾ ಯುವತಿಯರು ತಮ್ಮ ಯುವಶಕ್ತಿಯನ್ನು ಈ ಸಂಘಟನೆಗಾಗಿ ವಿನಿಯೋಗಿಸಬೇಕೆಂದು ಕರೆಕೊಟ್ಟರು. ಅಧ್ಯಕ್ಷ ಭಾಷಣ ಮಾಡುತ್ತಾ ಶ್ರೀಮತಿ ಎನ್. ಗಾಯಿತ್ರಿದೇವಿ ಬೆಂಗಳೂರು ಇವರು ಧರ್ಮಶಾಸ್ತ್ರ, ವೇದಪುರಾಣ ಹಾಗೂ ಜನರ ಮೂಢ ನಂಬಿಕೆಗಳು ಮಹಿಳೆಯರ ಅನೇಕ ಬಂಧನಗಳಿಗೆ ಕಾರಣವಾಗಿವೆ. ಬಾಲ್ಯದಲ್ಲಿಯೇ ಹೆಂಗಸು ಅನ್ನುವ ಕಾರಣದಿಂದ ಶಿಕ್ಷಣದಿಂದ ವಂಚಿತಳಾಗುತ್ತಾಳೆ. ಒಂದು ವೇಳೆ ಕೊಟ್ಟರೂ ಅಡಿಗೆ, ಮನೆಕೆಲಸಗಳನ್ನು ಮಾಡಿಕೊಂಡು ತ್ಯಾಗ, ವಿನಯ, ಲಜ್ಜೆಗಳ ಪವಿತ್ರ ಖಣಿಯಾಗಿ ಗಂಡನಿಗೆ ಸಂತೋಷಕೊಟ್ಟು ಮಕ್ಕಳನ್ನು ಹೆರುವ ಒಂದು ಯಂತ್ರವಾಗುವಂತಹ ಶಿಕ್ಷಣ ಕೊಡಲಾಗುತ್ತದೆ. ಒಬ್ಬಿಬ್ಬ ಮಹಿಳೆ ಪ್ರಧಾನಿಯಾದರೆ ಉನ್ನತ ಹುದ್ದೆಯಲ್ಲಿ ಬಂದರೆ ಸಾಲದು ಉದಾ:- ಶ್ರೀಮತಿ ಇಂದಿರಾಗಾಂಧಿ ಪ್ರಧಾನಿಯಾದ ಮೇಲೆ ಮಹಿಳೆ ಪ್ರಧಾನಿ ಪಟ್ಟಕ್ಕೆ ಬಂದಿದ್ದಾಳೆ ಎಂಬ ಸಂತೋಷವುಂಟಾದರೂ ಮಹಿಳೆಯರ ಮೂಲಭೂತ ಸಮಸ್ಯೆಗಳಲ್ಲಿ ಬದಲಾವಣೆಯಾಗದೆ ಇನ್ನೂ ಹೀನಸ್ಥಿತಿಗೆ ಬಂದಿದ್ದಾಳೆ. ಈ ಎಲ್ಲಾ ಸಮಸ್ಯೆಗಳ ಪರಿಹಾರವಾಗಿ ಮಹಿಳೆಯರ ವಿಮೋಚನೆಯಾಗಬೇಕಾದರೆ ಈ ಕ್ರೂರ ವ್ಯವಸ್ಥೆಯ ಬದಲಾವಣೆ ಅತಿ ಅವಶ್ಯ. ಈ ದಿಶೆಯಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ರೂಪುಗೊಂಡ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಅಂದರೆ ಉದ್ಯೋಗ ಮಹಿಳೆಯರ ಮೂಲಭೂತ ಹಕ್ಕಾಗಬೇಕು. ಸಾರ್ವತ್ರಿಕವಾದ ಉಚಿತ ಶಿಕ್ಷಣ ದೊರೆಯಬೇಕು. ಅಶ್ಲೀಲ ಸಿನಿಮಾ, ಸಾಹಿತ್ಯ, ನಾಟಕಗಳನ್ನು ಪ್ರತಿಭಟಿಸುವುದು ಇತ್ಯಾದಿ. ಈ ದಿಕ್ಕಿನಲ್ಲಿ ರಾಯಚೂರಿನ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಬಲಶಾಲಿಯಾಗಿ ಕೆಲಸಮಾಡಲಿ ಮಹಿಳೆಯರ ವಿಮೋಚನೆಗೆ ಹಾಗೂ ಸ್ತ್ರೀ ಪುರುಷ ಇಬ್ಬರು ಸಮವಾಗಿ ಬದುಕುವಂತಹ ಸಮಾಜದ ರಚನೆಯಲ್ಲಿ ಮಹಿಳಾ ಶಕ್ತಿ ಇತರೆಲ್ಲಾ ಕ್ರಾಂತಿಕಾರಿ ಶಕ್ತಿಗಳೊಂದಿಗೆ ಸೇರಿ ಹೋರಾಡಲಿ ಎಂದು ಹಾರೈಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಕಾರ್ಯಕರ್ತೆ ಶ್ರೀಮತಿ ಹರಣಿಕಕ್ಕೇರಿ ಇವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ಅಂಗವಾಗಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಲಾಗಿತ್ತು. ಅದೇ ದಿನ ರಾಯಚೂರಿನ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು ಸಭೆ ಸೇರಿ ಇಪ್ಪತ್ತೊಂದು (21) ಜನರ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು. ಅಲ್ಲದೆ ಕಾರ್ಯಕಾರಿ ಸಮಿತಿ ಸಭೆ ಸೇರಿ ಶ್ರೀಮತಿ ಸುಲೋಚನಾಸಂಘ ಇವರನ್ನು ಸಂಚಾಲಕಿಯಾಗಿಯೂ ಶ್ರೀಮತಿ ಹರಣಿಕಕ್ಕೇರಿ, ಶ್ರೀಮತಿ ಲಲಿತನಾಯ್ಕ, ಅಂಬುಜಾ ಮತ್ತು ಮಂಜುಳಾ ಇವರನ್ನು ಸಹ ಸಂಚಾಲಕಿಯರನ್ನಾಗಿ ಮತ್ತು ಶ್ರೀಮತಿ ದೀಕ್ಷಾ ಮಾಡಿಗೆರಿ ಇವರನ್ನು ಖಜಾಂಚಿಯಾಗಿಯೂ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ವರದಿ—ಸುಲೋಚನಾ ಸಂಘ

ಸಂಪಾದಕೀಯ

(ಒಂದನೇ ಪುಟದಿಂದ)

ಪ್ರಿಯಂತೆ ಕುಗ್ಗುತ್ತಾ ಬಂದಿತ್ತು. ಯಾವ ಗಳಿಗೆಯಲ್ಲಿ ಏನಾಗುವುದು ಎಂಬುದನ್ನು ಹೇಳುವುದು ಅಸಾಧ್ಯ ಎಂಬುದಾಗಿ ಇತ್ತೀಚೆಗೆ ಹಲವಾರು ಪತ್ರಿಕೆಗಳಲ್ಲಿ ಈಜಿಪ್ಟಿನ ಬಗ್ಗೆ ಹೇಳಲಾಗಿತ್ತು.

ಇದೀಗ ಈಜಿಪ್ಟಿನಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಲಾಗಿದೆ. ತಾಲೆಬ್ ಅವರು ಹಂಗಾಮಿ ಅಧ್ಯಕ್ಷರಾಗಿದ್ದಾರೆ. ಮುಂದೆ ಹೊಸ ಅಧ್ಯಕ್ಷರನ್ನೂ ಚುನಾಯಿಸಬೇಕು. ಆದರೆ ಈಜಿಪ್ಟ್ ಈಗ ಅನುಸರಿಸುತ್ತಿರುವ ಅಮೇರಿಕ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳಿಗೆ ಅನುಕೂಲವಾಗಿರುವ ಮತ್ತು ಅರಬ ಜನಾಂಗಕ್ಕೆ ಪ್ರತಿಕೂಲವಾಗಿರುವ ಧೋರಣೆಗಳಲ್ಲಿ ಬದಲು ಆಗದಿದ್ದರೆ, ಆಂತರಿಕವಾಗಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಜನತೆಗೆ ಒದಗಿಸಿಕೊಡದಿದ್ದರೆ ಇನ್ನೆಷ್ಟೋ ಸಾವುನೋವುಗಳಾಗುವ ಸಾಧ್ಯತೆ ಇದೆ.

●

ಕೃಷಿ ಕಾರ್ಮಿಕರ ಯಶಸ್ವಿ ಸಮಾವೇಶ

(1ನೇ ಪುಟದಿಂದ)

ಟಕ್ಕೆ ಸನ್ನದ್ಧರಾಗುವ ಮೊದಲ ಹೆಜ್ಜೆಯಾಗಿದೆ.

ಸುಮಾರು 600 ಜನ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಕೃಷಿ ವಿಶ್ವವಿದ್ಯಾನಿಲಯದ ಅನೇಕ ಫಾರ್ಮಿನ ಕೃಷಿಕಾರ್ಮಿಕರು ಭಾಗವಹಿಸಿದ್ದರಲ್ಲದೆ ಬಿಜಾಪುರ, ಬೆಳಗಾಂವ, ರಾಯಚೂರು, ಮಂಗಳೂರು, ಬೆಂಗಳೂರು ಜಿಲ್ಲೆಯಿಂದಲೂ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಕೃಷಿಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ. ವಿ. ಎನ್. ಹಳಕಟ್ಟಿ ವಹಿಸಿದ್ದರು. ಸಮಾವೇಶವನ್ನು ಕಾಂ. ವಿ. ಜೆ. ಕೆ. ನಾಯರ್, ಕಾರ್ಯದರ್ಶಿ ರಾಜ್ಯಸಮಿತಿ ಸಿ. ಐ. ಟಿ. ಯು. ಇವರು ಉದ್ಘಾಟಿಸಿದರು. ಕಾಂ. ಪಿ. ರಾಮಚಂದ್ರರಾವ್ ಪ್ರ. ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ, ಇವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕಾಂ. ಭೀಮಸಿ ಕಲಾದಗಿ, ನಿತ್ಯಾನಂದ ಸ್ವಾಮಿ, ಎಸ್. ಎಫ್. ಕ್ಯಾದಗಿ, ಕೆ. ಶಂಕರ, ಎಂ. ಬಿ. ಕಟ್ಟಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಸಂಜೆ ಕೃಷಿಕಾರ್ಮಿಕರ ಬೃಹತ್ ಮೆರವಣಿಗೆ ನಡೆಸಲಾಗಿತ್ತು. ಡೊಳ್ಳಿನ ಮಜಲು, ಬಂಧಿತ ಕೃಷಿಕೂಲಿಕಾರ ಶೃಂಖಲೆಗಳನ್ನು ಕಿತ್ತೊಗೆಯಲು ಹವಣಿಸುತ್ತಿರುವುದನ್ನು ಪ್ರತಿಬಿಂಬಿಸುವ ಕುಣಿತವು ಮೆರವಣಿಗೆಯನ್ನು ವರ್ಣರಂಜಿತಗೊಳಿಸಿದವು. ಸುಮಾರು 300 ಮಹಿಳೆಯರು ಸಹ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಜೀವನಾವಶ್ಯಕ ಕನಿಷ್ಠ ದಿನಗೂಲಿ ಪಡೆಯಲು ತೀವ್ರತರ ಹೋರಾಟ ರಾಜ್ಯದಾದ್ಯಂತ ನಡೆಸಬೇಕಾಗಿ ಸಮಾವೇಶ ಕೃಷಿಕಾರ್ಮಿಕರಿಗೆ ಕರೆನೀಡಿತು. ಕನಿಷ್ಠ ದಿನಗೂಲಿ ಜೀವನಾವಶ್ಯಕತೆಗೆ ಅನುಗುಣವಾಗಿ ನಿಗದಿಪಡಿಸಬೇಕೆಂದು ಅದು ತಿಂಗಳಿಗೆ 500 ರೂ.ಗಿಂತಲೂ ಹೆಚ್ಚು ನಿಗದಿಪಡಿಸಬೇಕೆಂದು ತೀರ್ಮಾನಿಸಲಾಯಿತು. ಇಂಥ ಇನ್ನ ಮೂರು ನಾಲ್ಕು ಸಮಾವೇಶಗಳನ್ನು ರಾಜ್ಯದಲ್ಲಿ ಜರುಗಿಸಿ ಕರ್ನಾಟಕ ಸರಕಾರಕ್ಕೆ ಜೀವನಾವಶ್ಯಕ ಕನಿಷ್ಠ ದಿನಗೂಲಿಯನ್ನು ಹೆಚ್ಚಿಸುವಂತೆ ಮತ್ತು ಕನಿಷ್ಠ ದಿನಗೂಲಿಗಳನ್ನು ಎಲ್ಲೆಲ್ಲೂ ಜಾರಿಗೆ ಬರುವಂತೆ ಒತ್ತಾಯಿಸಿ ಹೋರಾಡಲು ಕೃಷಿಕಾರ್ಮಿಕರು ಸನ್ನದ್ಧರಾಗಬೇಕೆಂದು ಸಮಾವೇಶದಲ್ಲಿ ತೀರ್ಮಾನಿಸಲಾಯಿತು. ●

ರಾವ್–ರಾಠೋಡ್ ವಿರಸ

(1ನೇ ಪುಟದಿಂದ)

ಚರಿತ್ರೆಯಲ್ಲಂತೂ, ಕಳೆದ ಕೆಲವು ವರ್ಷಗಳಿಂದ ಈ ಪ್ರಶ್ನೆಯು ಸಂಘಟನೆಯನ್ನು ವಿಭಜಿಸುವಂತೆಯೂ ಮಾಡಿದೆ. ಶ್ರೀಮತಿ ಇಂದಿರಾಗಾಂಧಿ ಮತ್ತು ದೇವರಾಜ ಅರಸು ಅವರೊಳಗೆ ಈ ವಿಚಾರಕ್ಕೆ ಸಂಬಂಧಿಸಿದಂತೆ ದೊಡ್ಡ ತಿಕ್ಕಾಟವೇ ನಡೆಯಿತು. ಕಾಂಗ್ರೆಸ್ ಎರಡಾಯಿತು. ಗುಂಡೂರಾವ್ ಮುಖ್ಯಮಂತ್ರಿಯವರಾದ ಮೇಲೂ ಈ ಪ್ರಶ್ನೆ ಆಗಾಗ ತಲೆ ಎತ್ತುತ್ತಿತ್ತು. ಕೊನೆಗೆ ರಾಠೋಡ್ ಅವರನ್ನು ಹೈಕಮಾಂಡ್ ಕೆ. ಪಿ. ಸಿ. ಸಿ. (ಐ)ಯ ಅಧ್ಯಕ್ಷರನ್ನಾಗಿಮಾಡಿತು. ಇದೀಗ ಮತ್ತೆ ಪ್ರಾರಂಭವಾಗಿರುವ ವಿರಸ ಮತ್ತೊಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಲೂಬಹುದು. ಸುಸಂದರ್ಭವನ್ನು ಕಾಯುತ್ತಾ ತಾಳ್ಮೆಯಿಂದಿರುವ ರಾಜ್ಯದ ಕಾಂಗ್ರೆ ಭಿನ್ನಮತೀಯರಿಗೆ ಹೊಸ ಹುರುಪು ಬಂದಿದೆ.

ಓದುಗರ ಗಮನಕ್ಕೆ

ದಿನಾಂಕ 20-9-81ರ ಪತ್ರಿಕೆಗಳು ಕೆಲವು ಕಡೆ ದೊರೆತಿಲ್ಲವೆಂಬ ದೂರುಗಳು ನಮ್ಮ ಕಾರ್ಯಾಲಯಕ್ಕೆ ತಲುಪಿವೆ. ಯಥಾಪ್ರಕಾರ ಎಲ್ಲ ಪೇಪರ ಬಂಡಲ್‌ಗಳನ್ನೂ ಆ ಶನಿವಾರ (19-9-81) ವೇ ಪೋಸ್ಟಮಾಡಿದ್ದೆವು.

ಪತ್ರಿಕೆಗಳು ಕೆಲವು ಕಡೆ ತಲುಪದಿದ್ದುದರ ಕುರಿತು ಅಂಚೆ ಇಲಾಖೆಯ ವರೆಗೆ ದೂರು ಸಲ್ಲಿಸಲಾಗಿದೆ. ಪತ್ರಿಕೆ ದೊರೆಯದಿದ್ದವರು ಸಂಬಂಧಪಟ್ಟ ಅಂಚೆಕಚೇರಿಯಲ್ಲಿ ವಿಚಾರಿಸಬೇಕಾಗಿ ಕೋರಿಕೆ.

ಓದುಗರಿಗೆ, ಏಜನ್ಸಿದಾರರಿಗೆ ತೊಂದರೆಯಾದುದಕ್ಕೆ ವಿಷಾದಿಸುತ್ತೇವೆ.

ವ್ಯವಸ್ಥಾಪಕರು
ಐಕ್ಯರಂಗ

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street